☞ ಹಾವೇರಿ
☞ ಗದಗ
☞ ಧಾರವಾಡ
☞ ದಾವಣಗೆರೆ
☞ ಚಿತ್ರದುರ್ಗ
☞ ವಿಜಯನಗರ
☞ ಶಿವಮೊಗ್ಗ
☞ ಬಳ್ಳಾರಿ

ಸುದ್ದಿ, ಫೋಟೋ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ : 9480410207

ಪಾಂಡವ

PANDAVA Regional Kannada News Paper ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಪತ್ರಿಕೆ, ಜಾಹೀರಾತು ಇಸ್ತಿಯಾರನಾಮೆಗಳಿಗಾಗಿ ಸಂಪರ್ಕಿಸಿ : ಮೊಬೈಲ್ ನಂ. : 9742789207 7411679202

* Volume : XVII * Issue : 079 * TUESDAY 17, NOVEMBER 2026 * Editor : S.T. VEDAMURTHY * Page : 6 * Rs : 2.50 * RNI No. KARKAN/2011/39005 * PMG/KA/NK/HVR-028/2026-28 * pandavarnr@gmail.com * Mob No.: 9742789207

ಪ್ರಮುಖ ಸಂಕ್ಷಿಪ್ತ ಸುದ್ದಿ

ತುಂಗಭದ್ರಾ ನದಿಗೆ ಹಾರಿ ವ್ಯಕ್ತಿ ಆತ್ಮಹತ್ಯೆ

ಪಾಂಡವ ನ್ಯೂಸ್, ರಾಣೆಬೆನ್ನೂರು: ತುಂಗಭದ್ರಾ ನದಿಗೆ ಹಾರಿ 70 ವರ್ಷದ ವೃದ್ಧರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕೊಡಿಹಾಳ ಹೊಸಪೇಟೆ ಸಮೀಪ ನಡೆದಿದೆ.

ಹರಿಹರ ತಾಲೂಕಿನ ಹಳ್ಳದಕೇರಿ ಗ್ರಾಮದ ನಿವಾಸಿ ಹಾಲಪ್ಪ ಕಾಳಪ್ಪ ಬಾವಿಕಟ್ಟಿ (70) ಮೃತರು.

ಹರಿಹರದಿಂದ ಕೊಡಿಹಾಳ ಹೊಸಪೇಟೆ ಕಡೆಗೆ ತೆರಳುವ ಮಾರ್ಗಮಧ್ಯೆ ಹಳೆಯ ಸೇತುವೆ ಬಳಿ ಸೈಕಲ್ ನಿಲ್ಲಿಸಿ, ಚಪ್ಪಲಿ ಹಾಗೂ ಮೊಬೈಲ್ ಫೋನ್ ಅಲ್ಲಿಯೇ ಬಿಟ್ಟು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಕುಮಾರಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಸವಣ್ಣನಿಗೆ 21 ಅಡಿ ಉದ್ದದ ರುದ್ರಾಕ್ಷಿ ಮಾಲೆ ಅರ್ಪಣೆ



ಪಾಂಡವ ನ್ಯೂಸ್, ಗುತ್ತಲ : ಪಟ್ಟಣದ ಕಲ್ಮಠದ ಬಸವ ಉ ದ್ಯಾ ನ' ವ' ನ' ದ' ಲ್ಲಿ ನಿರ್ಮಿಸಲಾಗಿರುವ 21 ಅಡಿ ಎತ್ತರದ ಏಕಶಿಲಾ ಬಸವೇಶ್ವರ ಮೂರ್ತಿಗೆ ಕಂಚಾರಗಟ್ಟಿ ಗ್ರಾಮದ ರೈತ ಬಸವರಾಜಪ್ಪ ಯಲಿಗಾರ ಹಾಗೂ ಸಹೋದರರು 21 ಅಡಿ ಉದ್ದದ ರುದ್ರಾಕ್ಷಿ ಮಾಲೆಯನ್ನು ಭಕ್ತಿಭಾವದಿಂದ ಅರ್ಪಿಸಿದರು.

ಬಸವಣ್ಣನವರ ಮೇಲಿನ ಅಪಾರ ಭಕ್ತಿ, ಶ್ರದ್ಧೆ ಮತ್ತು ಗೌರವದ ಸಂಕೇತವಾಗಿ ಯಲಿಗಾರ ಕುಟುಂಬದವರು ವಿಶೇಷವಾಗಿ ರುದ್ರಾಕ್ಷಿ ಮಾಲೆಯನ್ನು ಸಮರ್ಪಿಸಿರುವುದು ಭಕ್ತರ ಗಮನ ಸೆಳೆಯಿತು. 21 ಅಡಿ ಎತ್ತರದ ಏಕಶಿಲಾ ಬಸವೇಶ್ವರ ಮೂರ್ತಿಗೆ ಅದೇ ಉದ್ದದ ರುದ್ರಾಕ್ಷಿ ಮಾಲೆ ಅರ್ಪಿಸುವ ಮೂಲಕ ತಮ್ಮ ಭಕ್ತಿಯನ್ನು ಅಭಿವ್ಯಕ್ತಪಡಿಸಿದರು.ಗುತ್ತಲ ಕಲ್ಮಠದ ಆವರಣದಲ್ಲಿ ಬಸವೇಶ್ವರ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿದ್ದು, ನಾಡಿನ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ಬಸವಣ್ಣನವರ ದರ್ಶನ ಪಡೆಯುತ್ತಿದ್ದಾರೆ. ಮೂರ್ತಿಯ ಸುತ್ತಲಿನ ಬಸವ ಉದ್ಯಾನವನದ ಅಭಿವೃದ್ಧಿ ಕಾರ್ಯಗಳು ಹಾಗೂ ವಿವಿಧ ಅಲಂಕಾರಿಕ ವ್ಯವಸ್ಥೆಗಳು ಭಕ್ತರನ್ನು ಆಕರ್ಷಿಸುತ್ತಿವೆ. ಈ ಸಂದರ್ಭದಲ್ಲಿ ವೀರುಪಾಕ್ಷಪ್ಪ ಯಲಿಗಾರ, ನಾಗರಾಜ ಯಲಿಗಾರ, ರಾಜು ಯಲಿಗಾರ, ಕುರವತ್ತೆಪ್ಪ ಯಲಿಗಾರ, ಹನುಮಂತಗೌಡ ಗಂಗನಗೌಡ್ರ, ಮಲ್ಲಿಕಾರ್ಜುನ ಯಲಿಗಾರ ಸೇರಿದಂತೆ ಕಂಚಾರಗಟ್ಟಿ ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

ವೃದ್ಧರು ಕಾಣೆ

ಪಾಂಡವ ನ್ಯೂಸ್, ಹಾವೇರಿ : ಹಾವೇರಿ ತಾಲೂಕು ಬಸಾಪೂರ ಗ್ರಾಮದ ನಿವಾಸಿ 86 ವರ್ಷದ ರಾಚಪ್ಪ ದೇಟಿನ ಇದೇ ನವೆಂಬರ 9 ರಂದು ಶಿರಹಟ್ಟಿಗೆ ಹೋದವನು ಹಾಗೂ ಗುತ್ತಲ ನಿವಾಸಿ 68 ವರ್ಷದ ನೀಲಕಂಠಪ್ಪ ಹೊನ್ನಪ್ಪನವರ ನ.10 ರಂದು ಮೈಲಾರಕ್ಕೆ ಹೋದವರು ಮರಳಿ ಬಾರದೆ ಕಾಣೆಯಾಗಿರುವುದಾಗಿ ಗುತ್ತಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಕಾಣೆಯಾದ ರಾಚಪ್ಪ ದೇಟಿನ 5.2 ಅಡಿ ಎತ್ತರ, ಗೋದಿಮೈಬಣ್ಣ, ಕೋಲು ಮುಖ ಹೊಂದಿದ್ದು, ಬಿಳ್ಳಿ ಬಣ್ಣದ ಅಂಗಿ, ಜುಬ್ಬಾ ಪ್ಯಾಂಟ್ ಹಾಗೂ ಟೋಪಿ ಧರಿಸಿದ್ದಾನೆ. ನೀಲಕಂಠಪ್ಪ ಹೊನ್ನಪ್ಪನವರ 5.4 ಅಡಿ ಎತ್ತರ, ಗೋದಿಮೈಬಣ್ಣ, ಕೋಲು ಮುಖ ಹೊಂದಿದ್ದು, ಬಿಳಿ ಬಣ್ಣದ ಅಂಗಿ ಮತ್ತು ಲುಂಗಿ ಧರಿಸಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ ಎಂದು ಗುತ್ತಲ ಪೊಲೀಸ್ ಠಾಣೆ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

224 ಸಹಕಾರ ಸಂಘಗಳ ಬಲ; ನಬಾರ್ಡ್ ಅಂಗಳಕ್ಕೆ ಪ್ರಸ್ತಾವನೆ । ಆರ್‌ಬಿಐ ಅನುಮತಿಗಾಗಿ ಕಾಯುವಿಕೆ।

15 ವರ್ಷಗಳ ಕನಸಿಗೆ ರೆಕ್ಕೆ; ಹಾವೇರಿಗೆ ಸಿಗುವುದೇ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಭಾಗ್ಯ?

ಪಾಂಡವ ವಿಶೇಷ

ಹಾವೇರಿ : ಜಿಲ್ಲೆ ರಚನೆಯಾಗಿ 30 ವರ್ಷಗಳೇ ಕಳೆದರೂ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರತ್ಯೇಕ ಅಸ್ತಿತ್ವ ಹೊಂದಬೇಕೆಂಬ ಹಾವೇರಿ ಜಿಲ್ಲೆಯ ಜನರ ಕನಸು ಇನ್ನೂ ನನಸಾಗಿಲ್ಲ. ಇದೀಗ ಈ ಬಹುದಿನಗಳ ಬೇಡಿಕೆಗೆ ಹೊಸ ವೇಗ ದೊರೆತಿದೆ. ಹಾವೇರಿಯಲ್ಲಿ ಪ್ರತ್ಯೇಕ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್ ಸ್ಥಾಪನೆಯ ಅಗತ್ಯ, ಜಿಲ್ಲೆಯ ಆರ್ಥಿಕ ಸಾಮರ್ಥ್ಯ, ಸಹಕಾರ ಸಂಘಗಳ ವಹಿವಾಟು, ಸಾಲ ವಸೂಲಾತಿ ಹಾಗೂ ಮೂಲಸೌಕರ್ಯಗಳ ಕುರಿತು ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ (ಕೆಸಿಸಿ) ಬ್ಯಾಂಕ್ ಅಧಿಕಾರಿಗಳು ಸಿದ್ಧಪಡಿಸಿರುವ ಸಮಗ್ರ ವರದಿ ನಬಾರ್ಡ್ ಅಂಗಳ ತಲುಪಿದೆ. ನಬಾರ್ಡ್ ಪರಿಶೀಲನೆಯ ಬಳಿಕ ಮುಂದಿನ ಹಂತದ ಅನುಮೋದನೆಗಳು ದೊರೆತರೆ ಜಿಲ್ಲೆಯ ಬಹುದಿನಗಳ ಬೇಡಿಕೆಗೆ ಅಧಿಕೃತ ರೂಪ ಸಿಗುವ ನಿರೀಕ್ಷೆಯಿದೆ.

ಜಿಲ್ಲೆಯಿದೆ; ಪ್ರತ್ಯೇಕ ಬ್ಯಾಂಕ್ ಇಲ್ಲ! : ಧಾರವಾಡ ಜಿಲ್ಲೆಯಿಂದ ವಿಭಜನೆಗೊಂಡು ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡ ಹಾವೇರಿ ಆಡಳಿತಾತ್ಮಕವಾಗಿ ತನ್ನದೇ ಆದ ಅಸ್ತಿತ್ವ ಹೊಂದಿದೆ. ಜಿಲ್ಲಾಡಳಿತ, ಪೊಲೀಸ್, ಕಂದಾಯ, ಶಿಕ್ಷಣ, ಆರೋಗ್ಯ ಸೇರಿದಂತೆ ಬಹುತೇಕ ಇಲಾಖೆಗಳು ಪ್ರತ್ಯೇಕ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಸಹಕಾರ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಮಾತ್ರ



ಹಾವೇರಿ, ಗದಗ ಹಾಗೂ ಧಾರವಾಡ ಜಿಲ್ಲೆಗಳು ಒಂದೇ ಬ್ಯಾಂಕ್ ವ್ಯಾಪ್ತಿಯಲ್ಲಿವೆ. ಧಾರವಾಡ ಕೇಂದ್ರವಾಗಿರುವ ದಿ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಈ ಮೂರು ಜಿಲ್ಲೆಗಳ ಸಹಕಾರ ಸಂಘಗಳ ಹಣಕಾಸು ಚಟುವಟಿಕೆಗಳನ್ನು ನಿರ್ವಹಿಸುತ್ತಿದೆ.

ಕೃಷಿ ಪ್ರಧಾನ ಜಿಲ್ಲೆಯಾಗಿರುವ ಹಾವೇರಿಯಲ್ಲಿ ಸಹಕಾರ ಕ್ಷೇತ್ರ ರೈತರ ಆರ್ಥಿಕ ಚಟುವಟಿಕೆಗಳಿಗೆ ಪ್ರಮುಖ ಆಧಾರವಾಗಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರು ಬೆಳೆ ಸಾಲ ಹಾಗೂ ವಿವಿಧ ಹಣಕಾಸು ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಜಿಲ್ಲೆಯಲ್ಲಿಯೇ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯಾದರೆ ಸಹಕಾರ ಸಂಘಗಳ ನಿರ್ವಹಣೆ, ಸಾಲ ವಿತರಣೆ, ವಸೂಲಾತಿ ಮತ್ತು ಆಡಳಿತಾತ್ಮಕ ಸಮನ್ವಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ ಎಂಬುದು ಸ್ಥಳೀಯರ ಆಶಯ.

15 ವರ್ಷಗಳ ಹೋರಾಟಕ್ಕೆ ಹೊಸ ತಿರುವು : ಹಾವೇರಿ ಜಿಲ್ಲೆಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪಿಸಬೇಕೆಂಬ ಬೇಡಿಕೆ ಸುಮಾರು 15 ವರ್ಷಗಳಿಂದ ಕೇಳಿಬರುತ್ತಿದೆ. ಈ ಸಂಬಂಧ ಸಹಕಾರ ಕ್ಷೇತ್ರದ ಪ್ರಮುಖರು, ರೈತರು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘಟನೆಗಳು ಹಲವು ಬಾರಿ ಸರ್ಕಾರದ ಗಮನ ಸೆಳೆದಿವೆ. ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಅನುಮತಿ ಕೋರಿ ಈ ಹಿಂದೆಯೂ ನಬಾರ್ಡ್ ಮೂಲಕ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಅಂದಿನ ನಿಯಮಾವಳಿಗಳ ಪ್ರಕಾರ ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಅವಕಾಶವಿಲ್ಲ ಎಂಬ ಕಾರಣಕ್ಕೆ ಪ್ರಯತ್ನಗಳಿಗೆ ಯಶಸ್ಸು ಸಿಕ್ಕಿರಲಿಲ್ಲ.ಹೀಗಾಗಿ, ಜಿಲ್ಲೆ ರಚನೆಯಾದರೂ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರತ್ಯೇಕ ವ್ಯವಸ್ಥೆ ಇಲ್ಲದಿರುವುದು ಹಲವು ವರ್ಷಗಳಿಂದ ಚರ್ಚೆಯ ವಿಷಯವಾಗಿದೆ. ಇದೀಗ ಕೇಂದ್ರ ಸರ್ಕಾರದ ಸಹಕಾರ ಕ್ಷೇತ್ರ ಬಲವರ್ಧನೆಯ ಪ್ರಯತ್ನ ಹಾಗೂ 'ಜಿಲ್ಲೆಗೊಂದು ಡಿಸಿಸಿ ಬ್ಯಾಂಕ್' ಪರಿಕಲ್ಪನೆಯಿಂದ ಹಾವೇರಿಯ ಬೇಡಿಕೆಗೆ ಮತ್ತೆ ಬಲ ಬಂದಿದೆ.

ಅಮಿತ್ ಶಾ ನಿರ್ಧಾರದಿಂದ ಆಶಾಭಾವನೆ : ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ದೇಶದಲ್ಲಿ ಸಹಕಾರ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಜಿಲ್ಲೆಗೊಂದು ಡಿಸಿಸಿ ಬ್ಯಾಂಕ್ ಸ್ಥಾಪಿಸುವ ಪರಿಕಲ್ಪನೆಗೆ ಮುಂದಾಗಿದ್ದಾರೆ.

2ನೇ ಪುಟಕ್ಕೆ ▶▶▶

ಮಹಿಳೆಯರ ಸ್ವಾವಲಂಬನೆಯಿಂದ ಕುಟುಂಬ, ಸಮಾಜದ ಪ್ರಗತಿ ಸಾಧ್ಯ: ಪೂರ್ಣಿಮಾ ಕೋಳಿವಾಡ

ಮುಷ್ಟೂರಿನಲ್ಲಿ ಉಚಿತ ಹೊಲಿಗೆ ತರಬೇತಿ ಕೇಂದ್ರ ಆರಂಭ

ಪಾಂಡವ ನ್ಯೂಸ್, ರಾಣೇಬೆನ್ನೂರು : ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಿ, ಸ್ವಂತ ದುಡಿಮೆಯಿಂದ ಗೌರವಯುತ ಹಾಗೂ ನೆಮ್ಮದಿಯ ಜೀವನ ಸಾಗಿಸುವಂತಾಗಬೇಕು. ಮಹಿಳೆಯರು ವಿವಿಧ ಕೌಶಲ್ಯಗಳನ್ನು ಕಲಿತು ಆರ್ಥಿಕವಾಗಿ ಸಬಲರಾದಾಗ ಕುಟುಂಬದ ಅಭಿವೃದ್ಧಿಯೊಂದಿಗೆ ಸಮಾಜದ ಪ್ರಗತಿಯೂ ಸಾಧ್ಯವಾಗುತ್ತದೆ ಎಂದು ಪಿಕೆಕೆ ಇನಿಷಿಯೇಟಿವ್ಸ್ ಅಧ್ಯಕ್ಷೆ ಪೂರ್ಣಿಮಾ ಕೋಳಿವಾಡ ಹೇಳಿದರು.

ತಾಲೂಕಿನ ಮುಷ್ಟೂರು ಗ್ರಾಮದಲ್ಲಿ ಭಾನುವಾರ ಪಿಕೆಕೆ ಇನಿಷಿಯೇಟಿವ್ಸ್ ವತಿಯಿಂದ ಹಮ್ಮಿಕೊಂಡಿದ್ದ 'ನಿರುದ್ಯೋಗ ಮುಕ್ತ ರಾಣೇಬೆನ್ನೂರು' ಅಭಿಯಾನದ ಅಂಗವಾಗಿ ಮಹಿಳೆಯರಿಗಾಗಿ ಆರಂಭಿಸಲಾದ ಉಚಿತ ಹೊಲಿಗೆ ತರಬೇತಿ ಕೇಂದ್ರ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆಯರು ಕೇವಲ ಕುಟುಂಬದ ಜವಾಬ್ದಾರಿಗಳಿಗೆ ಸೀಮಿತವಾಗದೆ ಆರ್ಥಿಕ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಅನೇಕ ಮಹಿಳೆಯರು ಶಿಕ್ಷಣ



ಹಾಗೂ ವಿವಿಧ ಕೌಶಲ್ಯಗಳನ್ನು ಹೊಂದಿದ್ದರೂ ಸೂಕ್ತ ಅವಕಾಶಗಳ ಕೊರತೆಯಿಂದ ಮನೆಯಲ್ಲಿಯೇ ಉಳಿಯುವಂತಾಗಿದೆ. ಇಂತಹ ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಹೊಲಿಗೆ ಸೇರಿದಂತೆ ವಿವಿಧ ವೃತ್ತಿಪರ ಕೌಶಲ್ಯಗಳ ತರಬೇತಿ ಅತ್ಯಂತ ಸಹಕಾರಿಯಾಗಲಿದೆ ಎಂದರು. ತರಬೇತಿಯನ್ನು ಕೇವಲ ಪ್ರಮಾಣಪತ್ರ ಪಡೆಯುವ ಉದ್ದೇಶಕ್ಕೆ ಸೀಮಿತಗೊಳಿಸದೆ ಆಸಕ್ತಿಯಿಂದ ಕಲಿತು ಅದನ್ನು ಜೀವನೋಪಾಯದ ಮಾರ್ಗವನ್ನಾಗಿ ರೂಪಿಸಿಕೊಳ್ಳಬೇಕು. ಮಹಿಳೆಯರು ತಮ್ಮಲ್ಲಿರುವ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಗುರುತಿಸಿಕೊಂಡು ಸ್ವಂತ ಉದ್ಯೋಗದ ಮೂಲಕ ಆದಾಯ ಗಳಿಸುವಂತಾಗಬೇಕು. ಗ್ರಾಮೀಣ ಭಾಗದ ಮಹಿಳೆಯರಿಗೆ ಮನೆಯ ಸಮೀಪದಲ್ಲಿಯೇ ತರಬೇತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಉಚಿತ ಹೊಲಿಗೆ ತರಬೇತಿ ಕೇಂದ್ರ ಆರಂಭಿಸಲಾಗಿದೆ.

2ನೇ ಪುಟಕ್ಕೆ ▶▶▶

ಹಿರಿಯ ನಾಗರಿಕರ ವೈದ್ಯಕೀಯ ತಪಾಸಣಾ ಶಿಬಿರ



ಪಾಂಡವ ನ್ಯೂಸ್, ಹಾವೇರಿ : ಕೇಂದ್ರ ಪ್ರಾಯೋಜಿತ ಅಟಲ್ ವಯೋ ಅಭ್ಯುದಯ ಯೋಜನೆಯ ಉಪಯೋಜನೆಯಾದ ಹಿರಿಯ ನಾಗರಿಕರ ರಾಜ್ಯ ಕ್ರಿಯಾ ಯೋಜನೆಯಡಿಯಲ್ಲಿ ಭಾರತ ಸರ್ಕಾರ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಕರ್ನಾಟಕ ಸರ್ಕಾರ, ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಇವರ ಸಹಯೋಗದೊಂದಿಗೆ ಹಿರಿಯ ನಾಗರಿಕರಿಗೆ ಆರೋಗ್ಯ ಮತ್ತು ವೈದ್ಯಕೀಯ ತಪಾಸಣಾ(ಮರೆವಿನ ಕಾಯಿಲೆ) Health and medical camps (dementia screening) ಶಿಬಿರ ಇತ್ತೀಚೆಗೆ ಹಾವೇರಿ ನಗರದ ನಿವೃತ್ತ ನೌಕರರ ಭವನದಲ್ಲಿ ಜರುಗಿತು.

ಹಿರಿಯ ಸಿವಿಲ್ ನ್ಯಾಯವಾದಿಗಳು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಮತಿ ಶ್ರೀಶೈಲಜಾ ಹೆಚ್. ವಿ ಅವರು ಉದ್ಘಾಟನೆ ನೆರವೇರಿಸಿದರು.

ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ನ್ಯಾಯವಾದಿಗಳ ಸಂಘ ಅಧ್ಯಕ್ಷ ಹೆಚ್. ಸಿ. ಸಿದ್ದನಗೌಡರ, ಪೆನಲ್ ವಕೀಲ ಸುರೇಶ ಸಜ್ಜನ, ಜಿಲ್ಲಾ ಆಸ್ಪತ್ರೆ ವೈದ್ಯ ಡಾ. ಶಾಂತವೀರ, ಡಾ. ಮಹೇಶ ಬಡ್ಡಿ, ಡಾ ಶೃತಿ ಎ., ಆಪ್ತ ಸಮಾಲೋಚಕ ಈರಣ್ಣ ಚೌಡಣ್ಣನವರ, ವೈಭವ ದುಂಡನಕೊಪ್ಪ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಶ್ರೀಮತಿ ಆಶು ನದಾಫ, ಜಿಲ್ಲಾ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಎಸ್. ಬಿ. ಅಣ್ಣಿಗೇರಿ ಇತರರು ಭಾಗವಹಿಸಿದ್ದರು.

ಮಕ್ಕಳ ದಿನಾಚರಣೆ ವೇಳೆ ಹೃದಯಾಘಾತ: ಮುಖ್ಯಶಿಕ್ಷಕ ಸಾವು



ಪಾಂಡವ ನ್ಯೂಸ್, ಹಾವೇರಿ : ಮಕ್ಕಳ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ಉಪಹಾರ ವಿತರಿಸಿ, ಸಿಹಿ ಹಂಚಿ ತರಗತಿ ಕೊಠಡಿಗೆ ತೆರಳುತ್ತಿದ್ದ ಸರ್ಕಾರಿ ಶಾಲೆಯ ಮುಖ್ಯಶಿಕ್ಷಕರೊಬ್ಬರು ಹೃದಯಾಘಾತದಿಂದ ಶಾಲೆಯಲ್ಲಿಯೇ ಮೃತಪಟ್ಟ ಘಟನೆ ಶನಿವಾರ ನಡೆದಿದೆ.

ನಗರದ ಮೈಲಾರ ಮಹದೇವಪ್ಪ ವೃತ್ತದ ಬಳಿಯಿರುವ ಸರ್ಕಾರಿ ಪ್ರಾಥಮಿಕ ಶಾಲೆ ನಂ.2ರಲ್ಲಿ ಘಟನೆ ಸಂಭವಿಸಿದೆ.

ಮೃತರನ್ನು ಜೆ.ಆರ್. ಯಲವದಹಳ್ಳಿ (59) ಎಂದು ಗುರುತಿಸಲಾಗಿದೆ. ಮಕ್ಕಳ ದಿನಾಚರಣೆ ನಿಮಿತ್ತ ಶಾಲೆಯ ಮಕ್ಕಳಿಗೆ ಉಪಹಾರ ನೀಡಿ, ಸಿಹಿ ಹಂಚಿದ ಬಳಿಕ ತಮ್ಮ ಕೊಠಡಿಗೆ ತೆರಳುತ್ತಿದ್ದ ವೇಳೆ ತೀವ್ರ ಹೃದಯಾಘಾತ ಸಂಭವಿಸಿ ಕೊನೆಯುಸಿರೆಳೆದಿದ್ದಾರೆ.

ಮೂಲತಃ ಹಿರೇಕೆರೂರು ತಾಲ್ಲೂಕಿನ ಅರಳಿಕಟ್ಟಿ ಗ್ರಾಮದವರಾದ ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪ್ರಧಾನಿ ಮೋದಿ ಭೇಟಿಯಾದ ಬೊಮ್ಮಾಯಿ ಕುಟುಂಬ: ಪುತ್ರಿಯ ವಿವಾಹಕ್ಕೆ ಆಹ್ವಾನ



ಪಾಂಡವ ನ್ಯೂಸ್, ನವದೆಹಲಿ : ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅವರು ಕುಟುಂಬ ಸಮೇತರಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಪುತ್ರಿಯ ವಿವಾಹ ಸಮಾರಂಭಕ್ಕೆ ಆಹ್ವಾನಿಸಿದ್ದಾರೆ. ಪ್ರಧಾನಿ ಮೋದಿ ಅವರಿಗೆ ವಿವಾಹದ ಆಮಂತ್ರಣ ಪತ್ರಿಕೆ ನೀಡಿ ಸಮಾರಂಭಕ್ಕೆ ಆಗಮಿಸಿ ನವದಂಪತಿಗಳಿಗೆ ಆಶೀರ್ವದಿಸುವಂತೆ ಮನವಿ ಮಾಡಿದ್ದಾರೆ.

ಈ ಭೇಟಿಯ ಫೋಟೊಗಳನ್ನು ಬಸವರಾಜ ಬೊಮ್ಮಾಯಿ ಅವರ ಪುತ್ರ ಭರತ ಬೊಮ್ಮಾಯಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ಕುಟುಂಬ ಸಮೇತ ಪ್ರಧಾನಿಯನ್ನು ಭೇಟಿಯಾಗಿ ವಿವಾಹಕ್ಕೆ ಆಹ್ವಾನಿಸಿರುವ ಕ್ಷಣಗಳು ಗಮನ ಸೆಳೆದಿವೆ.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ
VIJAYANAGARA SRI KRISHNADEVARAYA UNIVERSIT

ಮೊದಲ ಪುಟದಿಂದ.....

15 ವರ್ಷಗಳ ಕನಸಿಗೆ ರೆಕ್ಕೆ;.....

ಈ ಹಿನ್ನೆಲೆಯಲ್ಲಿ ಹೊಸ ಬ್ಯಾಂಕ್‌ಗಳ ಸ್ಥಾಪನೆಗೆ ಅಗತ್ಯವಿರುವ ಮಾಹಿತಿ ಹಾಗೂ ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯದ ಧಾರವಾಡ ಸೇರಿದಂತೆ ಎಂಟು ಡಿಸಿಸಿ ಬ್ಯಾಂಕ್‌ಗಳ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಈ ಸೂಚನೆಯ ಬೆನ್ನಲ್ಲೇ ಕೆಸಿಸಿ ಬ್ಯಾಂಕ್ ಅಧಿಕಾರಿಗಳು ಹಾವೇರಿ ಜಿಲ್ಲೆಯ ಸಹಕಾರ ಕ್ಷೇತ್ರದ ಸ್ಥಿತಿಗತಿಗಳನ್ನು ಪರಿಶೀಲಿಸಿ ವರದಿ ಸಿದ್ಧಪಡಿಸಿದ್ದಾರೆ. ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಸಂಖ್ಯೆ, ಅವುಗಳ ಆರ್ಥಿಕ ವಹಿವಾಟು, ಸಾಲ ವಸೂಲಾತಿ, ಸದಸ್ಯರ ವಿವರ, ಬ್ಯಾಂಕ್ ಸ್ಥಾಪನೆಗೆ ಅಗತ್ಯವಿರುವ ಕಟ್ಟಡ, ಜಾಗ ಹಾಗೂ ಮೂಲಸೌಕರ್ಯಗಳ ಕುರಿತು ಮಾಹಿತಿ ಸಂಗ್ರಹಿಸಿ ಪುರಾವೆಗಳ ಸಹಿತ ಸಲ್ಲಿಸಲಾಗಿದೆ. ಈ ಮೂಲಕ ಹಾವೇರಿಯಲ್ಲಿ ಪ್ರತ್ಯೇಕ ಬ್ಯಾಂಕ್ ಸ್ಥಾಪನೆಯ ಅಗತ್ಯ ಮತ್ತು ಕಾರ್ಯನಿರ್ವಹಣೆಯ ಸಾಮರ್ಥ್ಯವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆದಿದೆ.

224 ಸಂಘಗಳ ಬಲ; ಏಳು ಸದಸ್ಯರ ಪ್ರಾತಿನಿಧ್ಯ : ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಅವರ ಪ್ರಕಾರ, ಬ್ಯಾಂಕ್ ವ್ಯಾಪ್ತಿಯಲ್ಲಿ ಹಾವೇರಿ ಜಿಲ್ಲೆಯಿಂದ ಏಳು ಮಂದಿ ಸದಸ್ಯರಿದ್ದಾರೆ. ಜಿಲ್ಲೆಯಲ್ಲಿರುವ 224 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಾಹಿತಿ ಸೇರಿದಂತೆ ಅವುಗಳ ಆರ್ಥಿಕ ವಹಿವಾಟು ಮತ್ತು ಸಾಲ ವಸೂಲಾತಿಯ ವಿವರಗಳನ್ನು ವರದಿಯಲ್ಲಿ ದಾಖಲಿಸಲಾಗಿದೆ. ಜಿಲ್ಲೆಯ ಸಹಕಾರ ಕ್ಷೇತ್ರದ ಆರ್ಥಿಕ ಸಾಮರ್ಥ್ಯ ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಪೂರಕವಾಗಲಿದೆ ಎಂಬುದು ಅವರ ಅಭಿಪ್ರಾಯ.

ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಗೆ ಸಂಬಂಧಿಸಿದಂತೆ 10ರಿಂದ 12 ಪ್ರಮುಖ ಷರತ್ತುಗಳಿದ್ದು, ಅವುಗಳನ್ನು ಪೂರೈಸುವ ಅರ್ಹತೆ ಹಾವೇರಿ ಜಿಲ್ಲೆ ಹೊಂದಿದೆ ಎಂದು ಕೆಸಿಸಿ ಬ್ಯಾಂಕ್ ನಿರ್ದೇಶಕರು ತಿಳಿಸಿದ್ದಾರೆ. ಸಹಕಾರ ಸಂಘಗಳ ಕಾರ್ಯನಿರ್ವಹಣೆ, ಆರ್ಥಿಕ ವಹಿವಾಟು, ಸಾಲ ವಸೂಲಾತಿ ಹಾಗೂ ಬ್ಯಾಂಕ್ ನಿರ್ವಹಣೆಗೆ ಅಗತ್ಯವಿರುವ ವ್ಯವಸ್ಥೆಗಳ ಕುರಿತು ಸಮಗ್ರ ಮಾಹಿತಿ ನೀಡಲಾಗಿದೆ.

ಆದರೆ, ಸಂಘಗಳ ಸಂಖ್ಯೆಗೆ ಸಂಬಂಧಿಸಿದಂತೆ ನಬಾರ್ಡ್‌ನ ಜಿಲ್ಲಾ ಮಟ್ಟದ 202627ರ ವರದಿಯಲ್ಲಿ 232 ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಮಾಹಿತಿ ಉಲ್ಲೇಖವಾಗಿದೆ. ಕೆಸಿಸಿ ಬ್ಯಾಂಕ್ ವರದಿಯಲ್ಲಿರುವ 224 ಸಂಖ್ಯೆಯೊಂದಿಗೆ ವ್ಯತ್ಯಾಸವಿರುವುದರಿಂದ ಅಧಿಕೃತ ಅಂತಿಮ ಅಂಕಿ-ಅಂಶವನ್ನು ಪರಿಶೀಲಿಸುವ ಅಗತ್ಯವಿದೆ.

ಕಟ್ಟಡ, ನಾಲ್ಕು ಗುಂಟೆ ಜಾಗದ ವ್ಯವಸ್ಥೆ : ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಆರ್ಥಿಕ ಅರ್ಹತೆಯ ಜತೆಗೆ ಅಗತ್ಯ ಮೂಲಸೌಕರ್ಯಗಳೂ ಮುಖ್ಯವಾಗಿವೆ. ಈ ನಿಟ್ಟಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಸುಸಜ್ಜಿತ ಕಟ್ಟಡ ಹಾಗೂ ಖಿಲ್ಲಾ ಪ್ರದೇಶದಲ್ಲಿ ನಾಲ್ಕು ಗುಂಟೆ ಜಾಗ ಲಭ್ಯವಿದೆ ಎಂಬ ಮಾಹಿತಿಯನ್ನು ಕೆಸಿಸಿ ಬ್ಯಾಂಕ್ ಅಧಿಕಾರಿಗಳು ವರದಿಯಲ್ಲಿ ಸೇರಿಸಿದ್ದಾರೆ ಎಂದು ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ತಿಳಿಸಿದ್ದಾರೆ.

ನಬಾರ್ಡ್ ಬಳಿಕ ಆರ್‌ಬಿಐ ಅಂಗಳಕ್ಕೆ : ಹಾವೇರಿಯಲ್ಲಿ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯ ಪ್ರಸ್ತಾವನೆ ಸದ್ಯ ನಬಾರ್ಡ್ ಪರಿಶೀಲನೆಯ ಹಂತದಲ್ಲಿದೆ ಎಂದು ಕೆಸಿಸಿ ಬ್ಯಾಂಕ್ ವಲಯದಿಂದ ಮಾಹಿತಿ ಲಭ್ಯವಾಗಿದೆ. ನಬಾರ್ಡ್ ಪರಿಶೀಲನೆ ಮತ್ತು ಶಿಫಾರಸಿನ ಬಳಿಕ ಸಂಬಂಧಪಟ್ಟ ಆಡಳಿತಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡು, ಆರ್‌ಬಿಐನ ನಿಯಂತ್ರಣಾತ್ಮಕ ಅನುಮೋದನೆ ಪಡೆಯಬೇಕಾಗುತ್ತದೆ. ಅಂತಿಮ ಅನುಮತಿ ದೊರೆತ ನಂತರವೇ ಪ್ರತ್ಯೇಕ ಬ್ಯಾಂಕ್ ಸ್ಥಾಪನೆ ಕುರಿತು ಅಧಿಕೃತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗಲಿದೆ.ಈ ಕುರಿತು ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು, ಹಾವೇರಿಯಲ್ಲಿ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯ ಪ್ರಯತ್ನಗಳು ಪ್ರಗತಿಯಲ್ಲಿವೆ. ಈಗಾಗಲೇ ಕಡತ ನಬಾರ್ಡ್‌ಗೆ ತಲುಪಿದ್ದು, ಅಲ್ಲಿಂದ ಅನುಮತಿ ದೊರೆತ ನಂತರ ಮುಂದಿನ ಹಂತವಾಗಿ ಆರ್‌ಬಿಐಗೆ ಸಲ್ಲಿಕೆಯಾಗಲಿದೆ. ಅಂತಿಮ ಅನುಮೋದನೆ ದೊರೆತರೆ ಪ್ರತ್ಯೇಕ ಬ್ಯಾಂಕ್ ಸ್ಥಾಪನೆಗೆ ಹಾದಿ ಸುಗಮವಾಗಲಿದೆ ಎಂದು ತಿಳಿಸಿದ್ದಾರೆ.

ಆರ್‌ಬಿಐ ಹಂತದಲ್ಲಿ ಯಾವುದೇ ತಾಂತ್ರಿಕ ಅಥವಾ ಆಡಳಿತಾತ್ಮಕ ಸಮಸ್ಯೆ ಎದುರಾದರೆ ಸಂಸದ ಬಸವರಾಜ ಬೊಮ್ಮಾಯಿ ಸೇರಿದಂತೆ ಕೇಂದ್ರದ ಸಚಿವರ ಸಹಕಾರ ಪಡೆಯುವ ಬಗ್ಗೆಯೂ ಸಚಿವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಬೇಡಿಕೆ ಇದೀಗ ಮಹತ್ವದ ಹಂತ ತಲುಪಿರುವುದು ಜಿಲ್ಲೆಯ ಜನರಲ್ಲಿ ನಿರೀಕ್ಷೆ ಮೂಡಿಸಿದೆ.ರೈತರಿಗೆ ಏನೆಲ್ಲ ಅನುಕೂಲ? : ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯಾದರೆ ಜಿಲ್ಲೆಯ ರೈತರು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆಯಿದೆ. ಪ್ರಸ್ತುತ ಸಹಕಾರ ಸಂಘಗಳ ಮೂಲಕ ರೈತರಿಗೆ ತಲುಪುತ್ತಿರುವ ಕೃಷಿ ಸಾಲ ಹಾಗೂ ಇತರ ಹಣಕಾಸು ಸೇವೆಗಳಿಗೆ ಪ್ರತ್ಯೇಕ ಜಿಲ್ಲಾ ಮಟ್ಟದ ಬ್ಯಾಂಕಿನ ಬೆಂಬಲ ದೊರೆಯಲಿದೆ.

ಪಕ್ಷಾತೀತ ಬೆಂಬಲ; ಜಿಲ್ಲೆಯ ನಿರೀಕ್ಷೆ : ಕೆಸಿಸಿ ಬ್ಯಾಂಕ್ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ ಮಾತನಾಡಿ, ಹಾವೇರಿ ಜಿಲ್ಲೆಯಲ್ಲಿ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಗೆ ಅಗತ್ಯವಿರುವ ಎಲ್ಲ ಅರ್ಹತೆಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಸಲ್ಲಿಸಲಾಗಿದೆ. ಜಿಲ್ಲೆಯ ಸಹಕಾರ ಸಂಘಗಳ ಆರ್ಥಿಕ ವಹಿವಾಟು, ಸಾಲ ವಸೂಲಾತಿ, ಸದಸ್ಯರ ವಿವರ ಹಾಗೂ ಮೂಲಸೌಕರ್ಯಗಳ ಮಾಹಿತಿಯನ್ನು ಪುರಾವೆಗಳೊಂದಿಗೆ ನೀಡಲಾಗಿದೆ. ನಬಾರ್ಡ್ ಪರಿಶೀಲನೆಯ ನಂತರ ಮುಂದಿನ ಹಂತದ ಅನುಮೋದನೆ ದೊರೆಯಬೇಕಿದೆ. ಜಿಲ್ಲೆಯ ಎಲ್ಲರೂ ಪಕ್ಷಾತೀತವಾಗಿ ಬ್ಯಾಂಕ್ ಸ್ಥಾಪನೆಗೆ ಸಹಕಾರ ನೀಡುತ್ತಿದ್ದಾರೆ. ಪ್ರತ್ಯೇಕ ಬ್ಯಾಂಕ್ ಸ್ಥಾಪನೆಯಾದರೆ ಜಿಲ್ಲೆಯ ರೈತರು ಹಾಗೂ ಸಹಕಾರ ಕ್ಷೇತ್ರಕ್ಕೆ ದೊಡ್ಡ ಬಲ ಸಿಗಲಿದೆ ಎಂದು ತಿಳಿಸಿದ್ದಾರೆ.

ಕನಸಿಗೆ ಅಧಿಕೃತ ಮುದ್ರೆ ಬೀಳುವುದೆಂದು? : 15 ವರ್ಷಗಳ ಬೇಡಿಕೆ, ಸಹಕಾರ ಸಂಘಗಳ ಆರ್ಥಿಕ ಸಾಮರ್ಥ್ಯ, ಮೂಲಸೌಕರ್ಯಗಳ ಲಭ್ಯತೆ ಹಾಗೂ ಜಿಲ್ಲೆಯ ಜನರ ಪಕ್ಷಾತೀತ ಬೆಂಬಲ ಹಾವೇರಿಯ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸ್ಥಾಪನೆಯ ನಿರೀಕ್ಷೆಯನ್ನು ಹೆಚ್ಚಿಸಿವೆ. ಆದರೆ, ನಬಾರ್ಡ್ ಪರಿಶೀಲನೆ ಮತ್ತು ಆರ್‌ಬಿಐ ಸೇರಿದಂತೆ ಸಂಬಂಧಪಟ್ಟ ಪ್ರಾಧಿಕಾರಗಳ ಅನುಮೋದನೆ ಇನ್ನೂ ಬಾಕಿಯಿದೆ. ಈ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡು ಅಧಿಕೃತ ಘೋಷಣೆಯಾದಾಗ ಮಾತ್ರ ಹಾವೇರಿಯ ಬಹುದಿನಗಳ ಕನಸು ನನಸಾದಂತಾಗಲಿದೆ. ಅಷ್ಟರಲ್ಲಿಯವರೆಗೆ ಜಿಲ್ಲೆಯ ರೈತರು, ಸಹಕಾರ ಕ್ಷೇತ್ರದ ಪ್ರಮುಖರು ಹಾಗೂ ಜನಪ್ರತಿನಿಧಿಗಳ ಚಿತ್ತ ಮುಂದಿನ ಅನುಮೋದನೆಯತ್ತ ನೆಟ್ಟಿದೆ.

ಮೊದಲ ಪುಟದಿಂದ.....

ಮುಘ್ಘೂರಿನಲ್ಲಿ ಉಚಿತ ಹೊಲಿ.....

ಮಹಿಳೆಯರು ತರಬೇತಿಯನ್ನು ಗಂಭೀರವಾಗಿ ಪರಿಗಣಿಸಿ ಕಲಿತ ವಿದ್ಯೆಯನ್ನು ಉದ್ಯೋಗವಾಗಿ ಪರಿವರ್ತಿಸಿಕೊಳ್ಳಬೇಕು. ಗ್ರಾಮೀಣ ಭಾಗದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಇಂತಹ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಅಗತ್ಯವಾಗಿವೆ. ನಿರುದ್ಯೋಗ ಮುಕ್ತ ರಾಣೇಬೆನ್ನೂರು ನಿರ್ಮಿಸುವ ನಿಟ್ಟಿನಲ್ಲಿ ಇಂತಹ ಜನಪರ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು.ಗ್ರಾಮೀಣ ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಇಂತಹ ಪ್ರಯತ್ನಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ತರಬೇತಿ ಪಡೆದ ಮಹಿಳೆಯರು ಮುಂದಿನ ದಿನಗಳಲ್ಲಿ ಇತರ ಮಹಿಳೆಯರಿಗೂ ಮಾರ್ಗದರ್ಶಕರಾಗಿ, ಸ್ವಾವಲಂಬಿ ಬದುಕಿನ ಸಂದೇಶ ಸಾರುವಂತಾಗಬೇಕು ಎಂಬ ಆಶಯ ಕಾರ್ಯಕ್ರಮದಲ್ಲಿ ವ್ಯಕ್ತವಾಯಿತು.ಕಾರ್ಯಕ್ರಮದಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ, ಮಂಜಯ್ಯ ಚಾವಡಿ, ಮಾರುತಿ, ದಿಳ್ಳೆಪ್ಪ ಹೊಟ್ಟಿಗೌಡ್ರು, ಪ್ರಶಾಂತರಡ್ಡಿ ಯರೇಕುಪ್ಪಿ, ಬೀರಪ್ಪ ತೋಟಗಂಟಿ, ದಿಳ್ಳೆಪ್ಪ ಗಂಗಣ್ಣನವರ, ರಮೇಶ ಹಲ್ಲಣ್ಣೆರ, ಕಾವ್ಯ ಮುಘ್ಘೂರ ನಾಯಕರ, ಸುಧಾ ಪಾಟೀಲ್, ರೇಷ್ಮಾ ದೊಡ್ಡಮನಿ, ಕರಬಸಪ್ಪ ಮಡಿವಾಳರ, ಸುರೇಶ ತಳವಾರ, ಸುನಂದವ್ವ ಗೊರವರ, ಭೀಮಪ್ಪ ಹಿರೇಮರದ, ನಂದಾ ಪಾಟೀಲ, ಮಂಜಪ್ಪ ಲಿಂಗದಹಳ್ಳಿ ಸೇರಿದಂತೆ ಮಹಿಳೆಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ನ.27 ರಂದು ಕನಕದಾಸರ ಜಯಂತಿ ಅರ್ಥಪೂರ್ಣ ಆಚರಣೆ : ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್.

ಪಾಂಡವ ನ್ಯೂಸ್,ಹಾವೇರಿ : ಜಿಲ್ಲಾ ಮಟ್ಟದ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮ ನ.27 ರಂದು ಕಾಗಿನೆಲೆ ಮಠದ ಆವರಣದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್. ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಶ್ರೀ ಕನಕದಾಸರ ಜಯಂತಿ ಆಚರಣೆ ಪೂರ್ವ ಸಿದ್ಧತೆ ಸಭೆ ಅಧ್ಯಕ್ಷತೆ ವಹಿಸಿ, ಸಮಾಜದ ಮುಖಂಡರೊಂದಿಗೆ ಚರ್ಚಿಸಿದ ಅವರು, ಸಮಾಜದ ಮುಖಂಡರ ನಿರ್ಣಯದಂತೆ ಅಂದು ಬೆಳಿಗ್ಗೆ 11 ಗಂಟೆಗೆ ಕಾಗಿನೆಲೆ ವೃತ್ತದಲ್ಲಿ ಶ್ರೀ ಕನಕದಾಸರ ಮೂರ್ತಿ ಆವರಣ ಹಾಗೂ ಮಧ್ಯಾಹ್ನ 2-30ಗಂಟೆಗೆ ವೇದಿಕೆ ಕಾರ್ಯಕ್ರಮ ಜರುಗಲಿದೆ. ಎಲ್ಲ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ಸೂಚನೆ ನೀಡಿದರು.



ಮೆರವಣಿಗೆಗೆ ಕಲಾ ತಂಡ, ಶಿಷ್ಟಾಚಾರದಂತೆ ಆಮಂತ್ರಣಪತ್ರಿಕೆ ಮುದ್ರಣಕ್ಕೆ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸರ್ಕಾರಿ ಕಚೇರಿ, ಶಾಲಾ-ಕಾಲೇಜುಗಳಲ್ಲಿ ಜಯಂತಿ ಆಚರಣೆ ಮಾಡಬೇಕು ಎಂದು ಸೂಚನೆ ನೀಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್. ಎಫ್.ಎನ್.ಗಾಜಿಗೌಡ್ರ ಮಾತನಾಡಿ, ಶ್ರೀ ಕನಕದಾಸರ ಜಯಂತಿ ಅಂಗವಾಗಿ ಕಾಗಿನೆಲೆ ಮಠದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಠದ ಸ್ವಾಮೀಜಿಗಳು ಹಳ್ಳಿಹಳ್ಳಿಗೆ ತೆರಳಿ ದುಶ್ಚಟಗಳನ್ನು ಬಿಡಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಇಂದಿನಿಂದ ಸಂಜೆ 6 ಗಂಟೆಗೆ ಮಠದ ಆವರಣದಲ್ಲಿ ಪುರಾಣ, ಅನ್ನಪ್ರಸಾದ ಸೇವೆ ಜರುಗಲಿದೆ ಎಂದರು.

ನ.27 ರಂದು ಬೆಳಿಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಅವರು ಕಾಗಿನೆಲೆ ವೃತ್ತದಲ್ಲಿ ಶ್ರೀ ಕನಕದಾಸರ ಮೂರ್ತಿ ಅನಾವರಣ ಮಾಡಲಿದ್ದಾರೆ. ಅಧಿಕಾರಿಗಳು ಹಾಗೂ ಸಮಾಜಬಾಂಧವರು, ಸಾರ್ವಜನಿಕರು ಎಲ್ಲರೂ ಸೇರಿಕೊಂಡು ಶ್ರೀ ಕನಕದಾಸರ ಜಯಂತಿ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಮಾಡೋಣ ಎಂದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಾಜದ ಜಿಲ್ಲಾ ಹಾಗೂ ತಾಲೂಕಾ ಅಧ್ಯಕ್ಷರು, ಸದಸ್ಯರು, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಬಸವಣ್ಣನವರ ತತ್ವಾದರ್ಶಗಳು ಇಂದಿನ ಪೀಳಿಗೆಗೆ ದಾರಿದೀಪ: ಸಿರಿಗೆರೆಯ ಶಿವಮೂರ್ತಿ ಶಿವಾಚಾರ್ಯ ಶ್ರೀ



ಪಾಂಡವ ನ್ಯೂಸ್, ಗುತ್ತಲ: ಬಸವಣ್ಣನವರ ತತ್ವಾದರ್ಶಗಳು ಇಂದಿನ ಪೀಳಿಗೆಯ ಬದುಕಿಗೆ ದಾರಿದೀಪವಾಗಿವೆ. ಭಕ್ತಿಯು ನಾಟಕೀಯವಾಗಿರದೆ ನೈಜತೆ ಮತ್ತು ಅಂತರಂಗದ ಶುದ್ಧತೆಯಿಂದ ಕೂಡಿರಬೇಕು ಎಂದು ಸಿರಿಗೆರೆಯ ತರಳಬಾಳು ಜಗದ್ಗುರು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಕಲ್ಮಠದ ಆವರಣದಲ್ಲಿ ಭಾನುವಾರ 21 ಅಡಿ ಎತ್ತರದ ಏಕಶಿಲಾ ಜಗಜ್ಯೋತಿ ಬಸವೇಶ್ವರರ ಮೂರ್ತಿ ಲೋಕಾರ್ಪಣೆ ಕಾರ್ಯಕ್ರಮದ ಅಂಗವಾಗಿ ಭಾನುವಾರ ಬೆಳಿಗ್ಗೆ ವರ್ಣರಂಜಿತ ಕಾರಂಜಿಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿ, ವಚನ ಸಾಹಿತ್ಯವು ಬಸವಾದಿ ಶಿವಶರಣರು ಜಗತ್ತಿಗೆ ನೀಡಿದ ಅತ್ಯ ಅಮೂಲ್ಯ ಕೊಡುಗೆಯಾಗಿದೆ. ಮಕ್ಕಳಿಗೆ ಶಿಕ್ಷಣದ ಜತೆಗೆ ಧಾರ್ಮಿಕ ಹಾಗೂ ನೈತಿಕ ಸಂಸ್ಕಾರ ನೀಡಿದಾಗ ಅವರ ಬದುಕು ಉಜ್ವಲವಾಗುತ್ತದೆ. 'ಉಳ್ಳವರು ಶಿವಾಲಯ ಮಾಡುವರು, ನಾನೇನು ಮಾಡಲಿ ಬಡವನಯ್ಯ' ಎಂಬ ಬಸವಣ್ಣನವರ ವಚನದ ಮೂಲಕ ಭಕ್ತಿಯ ನೈಜ ಅರ್ಥವನ್ನು ಮಾರ್ಮಿಕವಾಗಿ ವಿವರಿಸಿದರು. ಸ್ಥಾವರಗಳಿ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ ಎಂದು ಜಗತ್ತಿಗೆ ಸಾರಿದವರು ಬಸಣ್ಣನವರ ಎಂದ ಅವರು ಗುತ್ತಲ ಕಲ್ಮಠದ ಲಿಂಗೈಕ್ಯ ಸಂಗನಬಸವ ಸ್ವಾಮೀಜಿಯವರ ಸತ್ಯಸಂಕಲ್ಪವನ್ನು ಪ್ರಸ್ತುತ ಪೀಠಾಧ್ಯಕ್ಷ ಶ್ರೀಗುರುಸಿದ್ಧ ಸ್ವಾಮೀಜಿ ಸಾಕಾರಗೊಳಿಸಿರುವುದು ಶ್ಲಾಘನೀಯ.

ಸುಂದರ ಉದ್ಯಾನವನ ಹಾಗೂ 21 ಅಡಿ ಎತ್ತರದ ಬಸವೇಶ್ವರರ ಮೂರ್ತಿ ಮುಂದಿನ ಪೀಳಿಗೆಗೆ ಬಸವಣ್ಣನವರ ಆದರ್ಶಗಳನ್ನು ಪರಿಚಯಿಸುವ ಮಹತ್ವದ ಕಾರ್ಯವಾಗಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿ, ಬಸವಣ್ಣನವರ ಕಾಯಕತತ್ವ, ಜಾತ್ಯತೀತ ನಿಲುವು ಹಾಗೂ ಸಮಾನತೆಯ ಸಂದೇಶ ಎಲ್ಲ ನಾಯಕರಿಗೂ ಪ್ರೇರಣೆಯಾಗಬೇಕು. ಕಾಯಕ, ದಾಸೋಹ ಮತ್ತು ಸಮನ್ವಯದ ಮೂಲಕ ಜಗತ್ತಿಗೆ ಮಾನವೀಯತೆಯ ಸಂದೇಶ ಸಾರಿದ ಸಾಂಸ್ಕೃತಿಕ ನಾಯಕ ಬಸವೇಶ್ವರರ ಮೂರ್ತಿಯನ್ನು ಪ್ರತಿಷ್ಠಾಪಿಸುವ ಮೂಲಕ ಗುತ್ತಲ ಪಟ್ಟಣ ಮಾತ್ರವಲ್ಲ, ಇಡೀ ಹಾವೇರಿ ಜಿಲ್ಲೆ ಹೆಮ್ಮೆಪಡುವ ಕಾರ್ಯವನ್ನು ಗುರುಸಿದ್ಧ ಸ್ವಾಮೀಜಿ ಮಾಡಿದ್ದಾರೆ ಎಂದ ಸಂಜೀವಕುಮಾರ, ಮುಂದಿನ ದಿನಗಳಲ್ಲಿ ಉದ್ಯಾನವನದಲ್ಲಿ ಬಸವಾದಿ ಶಿವಶರಣರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಅನುಭವ ಮಂಟಪದ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಅವರ ಮೂಲಕ ಅಗತ್ಯ ಅನುದಾನಕ್ಕೆ ಶಿಫಾರಸು ಮಾಡುವುದಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಲ್ಮಠದ ಗುರುಸಿದ್ಧ ಸ್ವಾಮೀಜಿ ಮಾತನಾಡಿ, ಗುತ್ತಲ ಕಲ್ಮಠವು ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಬಸವಣ್ಣನವರ ತತ್ವಾದರ್ಶಗಳ ಹಾದಿಯಲ್ಲಿ ಮುನ್ನಡೆಯುತ್ತಿದೆ. ಲಿಂಗೈಕ್ಯ ಸಂಗನಬಸವ ಶ್ರೀಗಳ ಸಂಕಲ್ಪವಾಗಿದ್ದು, ಬಸವೇಶ್ವರರ ಏಕಶಿಲಾ ಮೂರ್ತಿ ಪ್ರತಿಷ್ಠಾಪನೆಯ ಕನಸು ನ.17ರಂದು ನನಸಾಗುತ್ತಿರುವುದು ಸಂತಸದ ಸಂಗತಿ. ಇದಕ್ಕೆ ಮಠದ ಭಕ್ತರ ಸಹಕಾರ ಹಾಗೂ ಸಂಗನಬಸವ ಮತ್ತು ರುದ್ರಮುನಿ ಶಿವಯೋಗಿಗಳ ಆಶೀರ್ವಾದವೇ ಕಾರಣ ಎಂದರು.

ಕರ್ಜಗಿಯ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ, ಜಿಲ್ಲಾ ಕಬ್ಬುಬೆಳೆಗಾರರ ಕ್ಷೇಮಾ

ಪ್ರಮುಖ ಸಂಕ್ಷಿಪ್ತ ಸುದ್ದಿ

ಸಂಗೀತ ಲೋಕದಲ್ಲಿ ಮಿಂಚಲು ಬಾಲಪ್ರತಿಭೆ ವಿಜಯಲಕ್ಷ್ಮೀಗೆ ವೇದಿಕೆಯ ಬಲ ಬೇಕು


ಪಾಂಡವ ನ್ಯೂಸ್, ಹುಬ್ಬಳ್ಳಿ: ಸಂಗೀತ ಕ್ಷೇತ್ರದಲ್ಲಿ ಗಮನ ಸೆಳೆಯುತ್ತಿರುವ ಹುಬ್ಬಳ್ಳಿಯ ಬಾಲಗಾಯಕಿ ವಿಜಯಲಕ್ಷ್ಮೀ ನಿಂಬರಗಿ ಅವರಿಗೆ ಸೂಕ್ತ ವೇದಿಕೆ ಕಲ್ಪಿಸಿ ಪ್ರೋತ್ಸಾಹಿಸಬೇಕು ಎಂದು ರಾಜ್ಯ ಶಿಕ್ಷಣ ಸಿರಿ ಪ್ರಶಸ್ತಿ ಪುರಸ್ಕೃತ ಚಿದಂಬರ ಪಿ. ನಿಂಬರಗಿ ಮನವಿ ಮಾಡಿದ್ದಾರೆ.

ತಂದೆ ಆನಂದ, ತಾಯಿ ದೀಪಾ ಅವರ ಪುತ್ರಿಯಾದ ವಿಜಯಲಕ್ಷ್ಮೀ ಒಂದನೇ ತರಗತಿಯಿಂದಲೇ ದೇವರನಾಮ, ಭಾವಗೀತೆ, ಜನಪದ ಹಾಗೂ ಚಿತ್ರಗೀತೆಗಳನ್ನು ಹಾಡುತ್ತಿದ್ದಾರೆ. ರಚನಾ ನಾಡಿಗೇರ ಅವರ ಲಲಿತ ಸಂಗೀತ ಪಾಠಶಾಲೆಯಲ್ಲಿ ಸಂಗೀತಾಭ್ಯಾಸ ಮಾಡುತ್ತಿರುವ ಅವರು, ತಾಲೂಕು ಮತ್ತು ಜಿಲ್ಲಾ ಮಟ್ಟದ ಶಾಲಾ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ.

ಪ್ರಸ್ತುತ ಹುಬ್ಬಳ್ಳಿಯ ಮಹಿಳಾ ವಿದ್ಯಾಪೀಠದ ಬಾಲಕಿಯರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ಓದುತ್ತಿರುವ ವಿಜಯಲಕ್ಷ್ಮೀ, ಮಿರಜ್‌ನ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದ ಪ್ರಾರಂಭಿಕ ಗಾಯನ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದಿದ್ದಾರೆ.

ಸಂಗೀತ ಶಿಕ್ಷಕಿ ರಚನಾ ನಾಡಿಗೇರ ಹಾಗೂ ವನಿತಾ ಕುಲಕರ್ಣಿ ಅವರ ಮಾರ್ಗದರ್ಶನದಲ್ಲಿ ಅಭ್ಯಾಸ ಮುಂದುವರಿಸಿರುವ ಬಾಲಪ್ರತಿಭೆಗೆ ಹೆಚ್ಚಿನ ಅವಕಾಶಗಳು ದೊರೆಯಬೇಕು. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಬೆಳೆಸಲು ಸರ್ಕಾರ ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಮುಂದಾಗಬೇಕು ಎಂದು ಚಿದಂಬರ ನಿಂಬರಗಿ ಆಗ್ರ

ನ.16ರಿಂದ 27ರವರೆಗೆ ವಿವಿಧ ಧಾರ್ಮಿಕ, ಸಾಮಾಜಿಕ ಜಾಗೃತಿ ಕಾರ್ಯಕ್ರಮ



ಪಾಂಡವ ನ್ಯೂಸ್, ಹಾವೇರಿ : ಜಿಲ್ಲೆಯ ಸುಕ್ಷೇತ್ರ ಕಾಗಿನೆಲೆ ಶ್ರೀ ಕನಕಗುರುಪೀಠದಲ್ಲಿ 539ನೇ ಕನಕ ಜಯಂತ್ಯುತ್ಸವ, ಕನಕ ರಥೋತ್ಸವ ಹಾಗೂ ಕನಕ ಕಾರ್ತಿಕೋತ್ಸವದ ಅಂಗವಾಗಿ ನ.16ರಿಂದ 27ರವರೆಗೆ ವಿವಿಧ ಧಾರ್ಮಿಕ ಮತ್ತು ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಜಗದ್ಗುರು ನಿರಂಜನಾನಂದಪುರಿ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ದುಶ್ಚಟ ಮುಕ್ತ ಸಮಾಜ ನಿರ್ಮಾಣದ ಜಾಗೃತಿ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮದ ಅಂಗವಾಗಿ ನ.16ರಂದು ಬಸಾಪುರ, ನ.17ರಂದು ತಿಮ್ಮಾಪುರ, ನ.18ರಂದು ಕೂರಗುಂದ, ನ.19ರಂದು ಭರಡಿ, ನ.21ರಂದು ಕಾಟೇನಹಳ್ಳಿ, ನ.22ರಂದು ಕಳ್ಳಿಹಾಳ, ನ.23ರಂದು ತೋಟದಯಲ್ಲಾಪುರ, ನ.24ರಂದು ಬೆಣಕನಹಳ್ಳಿ ಹಾಗೂ ನ.25ರಂದು ಯತ್ತಿನಹಳ್ಳಿ ಗ್ರಾಮಗಳಲ್ಲಿ ಸಂಜೆ 7ರಿಂದ 9 ಗಂಟೆಯವರೆಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಇದರ ಜತೆಗೆ ನ.16ರಿಂದ 26ರವರೆಗೆ ಶ್ರೀ ದಾನಮ್ಮ ದೇವಿ ಪುರಾಣ ಪ್ರವಚನ ನಡೆಯಲಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕನಕಗುರುಪೀಠದ ಧಾರ್ಮಿಕ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶ್ರೀ ಕನಕಗುರುಪೀಠದ ವತಿಯಿಂದ ಮನವಿ ಮಾಡಲಾಗಿದೆ.

ಜನಸಂಪರ್ಕ ಕಚೇರಿಯಲ್ಲಿ ನೆಹರು ಜಯಂತಿ ಆಚರಣೆ

ಪಾಂಡವ ನ್ಯೂಸ್, ಹಾನಗಲ್: ಶಾಸಕ ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ ಅವರ ಜನಸಂಪರ್ಕ ಕಚೇರಿಯಲ್ಲಿ ಭಾರತದ ಮೊದಲ ಪ್ರಧಾನಿ, ಆಧುನಿಕ ಭಾರತದ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಿದ ಪಂಡಿತ ಜವಾಹರಲಾಲ್ ನೆಹರು ಅವರ ಜಯಂತಿಯನ್ನು ಶನಿವಾರ ಆಚರಿಸಲಾಯಿತು.ಈ ಸಂದರ್ಭದಲ್ಲಿ ನೆಹರು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಲಾಯಿತು.ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ನೆಹರು ಅವರ ಕೊಡುಗೆ ಅಪಾರ. ಸ್ವಾತಂತ್ರ್ಯಾನಂತರ ರಾಷ್ಟ್ರದ ಅಭಿವೃದ್ಧಿ, ಪ್ರಜಾಪ್ರಭುತ್ವದ ಬಲವರ್ಧನೆ, ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆಗೆ ಅವರು ಹಾಕಿಕೊಟ್ಟ ಅಡಿಪಾಯ ಸ್ಮರಣೀಯ. ಆಧುನಿಕ ಭಾರತದ ನಿರ್ಮಾಣದಲ್ಲಿ ಅವರ ದೂರದೃಷ್ಟಿ ಹಾಗೂ ಸಾಧನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಮುಖಂಡರು ಸ್ಮರಿಸಿದರು.ಈ ಸಂದರ್ಭದಲ್ಲಿ ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ, ಮಂಜು ಗೊರಣ್ಣನವರ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ವೀರಪ್ಪ ಬೈಲವಾಳ, ಮುಖಂಡರಾದ ಶಿವು ಭದ್ರಾವತಿ, ಉಮೇಶ ಮಾಳಗಿ, ಉಮೇಶ ದೊಡ್ಡಮನಿ, ದಿನೇಶ ಕಲಾಲ, ಅರುಣ ಮಣ್ಣಮ್ಮನವರ, ಪ್ರವೀಣ ಹಿರೇಮಠ, ಸುರೇಶ ನಾಗಣ್ಣನವರ, ಪ್ರಕಾಶ ನಾಯ್ಕ, ಬಸಣ್ಣ ಕಾಲ್ವೆಕಲ್ಲಾಪುರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬ್ಯಾಡಗಿ ಬ್ಯಾಂಕ್ ಶಾಖೆಯಲ್ಲಿ ಅಗ್ನಿ ಅವಘಡ: ಪೀಠೋಪಕರಣ, ದಾಖಲೆಗಳು ಸುಟ್ಟು ಭಸ್ಮ



ಪಾಂಡವ ನ್ಯೂಸ್, ಬ್ಯಾಡಗಿ: ಪಟ್ಟಣದ ಗುಮ್ಮನಹಳ್ಳಿ ರಸ್ತೆಯಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿ ರಾತ್ರಿ ಸಂಭವಿಸಿದ ಅಗ್ನಿ ಅವಘಡದಿಂದ ಅಪಾರ ಹಾನಿ ಸಂಭವಿಸಿದೆ. ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿದ್ದು, ಬ್ಯಾಂಕ್‌ನಲ್ಲಿದ್ದ ಪೀಠೋಪಕರಣಗಳು ಹಾಗೂ ಕೆಲವು ಕಾಗದಪತ್ರಗಳು ಸುಟ್ಟುಹೋಗಿವೆ. ಘಟನೆಯ ಹಿನ್ನೆಲೆಯಲ್ಲಿ ಹುಬ್ಬಳ್ಳಿಯ ಬ್ಯಾಂಕ್‌ನ ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ಶಾಖೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಪಾಂಡವ ಪತ್ರಿಕೆಯ ವರದಿಗಾರರೊಂದಿಗೆ ಮಾತನಾಡಿದ ಹಿರಿಯ ಬ್ಯಾಂಕ್ ಅಧಿಕಾರಿಗಳು, ಅಗ್ನಿ ಅವಘಡದಿಂದ ಗ್ರಾಹಕರು ಹಾಗೂ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು. ಬ್ಯಾಂಕ್‌ನಲ್ಲಿದ್ದ ಹಣ, ಚಿನ್ನಾಭರಣ ಹಾಗೂ ಸಾಲ ಪಡೆದ ಗ್ರಾಹಕರ ದಾಖಲೆಗಳು ಸುರಕ್ಷಿತವಾಗಿವೆ. ಬೆಂಕಿಯಿಂದಾಗಿ ಬ್ಯಾಂಕ್‌ನ ಕೆಲವು ಪೀಠೋಪಕರಣಗಳು ಮತ್ತು ಕಾಗದಪತ್ರಗಳಿಗೆ ಮಾತ್ರ ಹಾನಿಯಾಗಿದೆ. ಮಂಗಳವಾರದಿಂದ ಎಂದಿನಂತೆ ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆ ಒದಗಿಸಲಾಗುವುದು ಎಂದು ತಿಳಿಸಿದರು. ಅಗ್ನಿ ಅವಘಡ ಸಂಭವಿಸಿದ ನಿಖರ ಸಮಯ ಹಾಗೂ ಬೆಂಕಿ ಕಾಣಿಸಿಕೊಳ್ಳಲು ಕಾರಣವೇನು ಎಂಬುದನ್ನು ತಿಳಿಯಲು ಬ್ಯಾಂಕ್‌ನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುವುದು. ಈ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದರು.

ಗುತ್ತಲದಲ್ಲಿ ಬಸವ ಉದ್ಯಾನವನ ಲೋಕಾರ್ಪಣೆ | ಸಂಗನಬಸವ ಶ್ರೀಗಳ ಸಂಕಲ್ಪ ನನಸು | ಬಸವಣ್ಣನ ಏಕಶಿಲಾ ಮೂರ್ತಿಗೆ ಗಣ್ಯರಿಂದ ನಮನ

ಮನುಷ್ಯರಾಗಿ ಹುಟ್ಟುವುದಷ್ಟೇ ಸಾಲದು, ಮನುಷ್ಯತ್ವದಿಂದ ಬದುಕಬೇಕು: ನಾಡೋಜ ಅನ್ನದಾನೀಶ್ವರ ಶ್ರೀ

ಪಾಂಡವ ನ್ಯೂಸ್, ಗುತ್ತಲ: ಮನುಷ್ಯರಾಗಿ ಹುಟ್ಟುವುದಕ್ಕಿಂತ ಮನುಷ್ಯತ್ವದ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕುವುದು ಮುಖ್ಯ. ಬಸವಣ್ಣನವರ ಕಾಯಕ, ದಾಸೋಹ ಹಾಗೂ ಸಮಾನತೆಯ ತತ್ವಗಳನ್ನು ಜೀವನದಲ್ಲಿ ಪಾಲಿಸಿದಾಗ ಮಾತ್ರ ಸ್ವಸ್ಥ ಸಮಾಜ ನಿರ್ಮಾಣ ಸಾಧ್ಯ ಎಂದು ಮುಂಡರಗಿ ಅನ್ನದಾನೇಶ್ವರ ಮಠದ ನಾಡೋಜ ಜ. ಅನ್ನದಾನೀಶ್ವರ ಸ್ವಾಮೀಜಿ ಹೇಳಿದರು.ಪಟ್ಟಣದ ಕಲ್ಮಠದ ಆವರಣದಲ್ಲಿ ಸೋಮವಾರ ನೂತನವಾಗಿ ನಿರ್ಮಿಸಿರುವ ಬಸವ ಉದ್ಯಾನವನ ಉದ್ಘಾಟಿಸಿ, ಬಸವಣ್ಣನವರ ಏಕಶಿಲಾ ಮೂರ್ತಿ ಲೋಕಾರ್ಪಣೆಗೊಳಿಸಿ ಆಶೀರ್ವಚನ ನೀಡಿದ ಅವರು, ಕಲ್ಮಠದ ಮೂಲಕರ್ತೃ ರುದ್ರಮುನಿ ಶಿವಯೋಗಿಗಳು ಮಹಾನ್ ತಪಸ್ವಿಗಳಾಗಿದ್ದರು. ಲಿಂಗೈಕ್ಯ ಸಂಗನಬಸವ ಸ್ವಾಮೀಜಿಗಳು ಸರಳತೆ, ಹಠಯೋಗ ಹಾಗೂ ಆಧ್ಯಾತ್ಮಿಕ ಸಾಧನೆಯ ಸಾಕಾರಮೂರ್ತಿಗಳಾಗಿದ್ದರು. ಅವರ ಕನಸು ನನಸಾಗುತ್ತಿರುವುದು ಐತಿಹಾಸಿಕ ಸುದಿನವಾಗಿದೆ ಎಂದರು. ಬಸವಣ್ಣನವರು ಸಮಾಜದಲ್ಲಿನ ಕಂದಾಚಾರ, ಜಾತಿ–ವರ್ಗದ ತಾರತಮ್ಯ ಹಾಗೂ ಕಟ್ಟುಪಾಡುಗಳನ್ನು ತೊಡೆದುಹಾಕಿ ಸಮಾನತೆಯ ಭಾವನೆ ಮೂಡಿಸಿದ ಮಹಾನ್ ಶರಣರು. ಅವರ ತತ್ವಾದರ್ಶಗಳು ಇಂದಿಗೂ ಪ್ರಸ್ತುತವಾಗಿವೆ. ಮುಂದಿನ ಪೀಳಿಗೆಗೂ ಬಸವಣ್ಣನವರ ವಿಚಾರಧಾರೆಗಳನ್ನು ತಲುಪಿಸುವುದು ಸಮಾಜದ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಕಲ್ಮಠದ ಸಂಗನಬಸವ ಸ್ವಾಮೀಜಿಗಳು ಸಂಕಲ್ಪಿಸಿದ್ದ ಏಕಶಿಲಾ ಬಸವಣ್ಣನವರ ಮೂರ್ತಿ ಪ್ರತಿಷ್ಠಾಪನೆ ಕಾರ್ಯವನ್ನು ಗುರುಸಿದ್ಧ ಸ್ವಾಮೀಜಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡುತ್ತಿರುವುದು ಮಹತ್ವದ ಸಾಧನೆ. ಇದು ಕೇವಲ ಮೂರ್ತಿ ಪ್ರತಿಷ್ಠಾಪನೆಯಲ್ಲ, ಬಸವಣ್ಣನವರ ತತ್ವಾದರ್ಶಗಳನ್ನು ಶಾಶ್ವತಗೊಳಿಸುವ ಪ್ರಯತ್ನವಾಗಿದೆ ಎಂದು ಬಣ್ಣಿಸಿದರು.

ಸಂಗನಬಸವ ಶ್ರೀಗಳ ಧಾರ್ಮಿಕ, ಶೈಕ್ಷಣಿಕ ಕ್ರಾಂತಿ : ಹುಬ್ಬಳ್ಳಿ ಮೂರುಸಾವಿರಮಠದ ಗುರುಸಿದ್ಧ ಸ್ವಾಮೀಜಿ ಮಾತನಾಡಿ, ಗುತ್ತಲ ಮತ್ತು ಅಗಡಿ ಮಠಗಳಿಗೆ ಒಬ್ಬರೇ ಮಠಾಧೀಶರಾಗಿದ್ದ ರುದ್ರಮುನಿ ಶಿವಯೋಗಿಗಳು



ಲಿಂಗಪೂಜಾನಿಷ್ಠರಾಗಿದ್ದರು. ಆರೇಳು ಗಂಟೆಗಳ ಕಾಲ ನಿರಂತರ ಲಿಂಗಪೂಜೆಯಲ್ಲಿ ಲೀನರಾಗಿರುತ್ತಿದ್ದರು. ಅವರ ಆಧ್ಯಾತ್ಮಿಕ ಪರಂಪರೆಯನ್ನು ಮುಂದುವರಿಸಿದ ಲಿಂಗೈಕ್ಯ ಸಂಗನಬಸವ ಸ್ವಾಮೀಜಿಗಳು ಭಕ್ತರೊಂದಿಗೆ ಬೆರೆತು ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಕಾರಿ ಕಾರ್ಯಗಳನ್ನು ಮಾಡಿದ್ದಾರೆ ಎಂದರು.

ಗುತ್ತಲ ಪ್ರವಾಸಿ ತಾಣವಾಗಲಿದೆ : ಮುಜರಾಯಿ ಸಚಿವ ರುದ್ರಪ್ಪ ಲಮಾಣಿ ಮಾತನಾಡಿ, ಬಸವಣ್ಣನವರ ಕಾಯಕ, ದಾಸೋಹ ಮತ್ತು ಸಮಾನತೆಯ ತತ್ವಗಳು ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಿವೆ. ಅನುಭವ ಮಂಟಪದ ಮೂಲಕ ಸಮಸಮಾಜ ನಿರ್ಮಾಣಕ್ಕೆ ಬಸವಣ್ಣನವರು ದಾರಿದೀಪವಾಗಿದ್ದಾರೆ. ಲಿಂಗೈಕ್ಯ ಸಂಗನಬಸವ ಸ್ವಾಮೀಜಿಗಳ ಸತ್ಯಸಂಕಲ್ಪ ಇಂದು ನನಸಾಗಿದೆ ಎಂದರು.

ಮುಜರಾಯಿ ಸಚಿವನಾಗಿ ಬಸವಣ್ಣನವರ ಶಿಲಾಮೂರ್ತಿಯನ್ನು ತಮಿಳುನಾಡಿನಿಂದ ಗುತ್ತಲ ಪಟ್ಟಣಕ್ಕೆ ತರಲು ಸಹಕಾರ ನೀಡಿದ್ದೇನೆ. ಮೂರ್ತಿ ನಿರ್ಮಾಣ ಕಾರ್ಯಕ್ಕೂ 23ರಿಂದ 30 ಲಕ್ಷದವರೆಗೆ ನೆರವು ನೀಡಲಾಗಿದೆ. ಮುಂದಿನ ದಿನಗಳಲ್ಲಿ ಗುತ್ತಲ ಪಟ್ಟಣ ಪ್ರವಾಸಿ ತಾಣವಾಗಿ ಅಭಿವೃದ್ಧಿಯಾಗಲಿದೆ ಎಂಬ ವಿಶ್ವಾಸವಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿತ್ತು. ಆದರೆ, ಅನಿವಾರ್ಯ ಕಾರ್ಯದ ಒತ್ತಡದಿಂದ ಬರಲು ಸಾಧ್ಯವಾಗಿಲ್ಲ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವ ಸರ್ಕಾರದ ಆಶಯಕ್ಕೆ ಪೂರಕವಾಗಿ ಕಲ್ಮಠದ ಶ್ರೀಗಳು ಭವ್ಯ ಶಿಲಾಮೂರ್ತಿ ಸ್ಥಾಪಿಸಿ ಲೋಕಾರ್ಪಣೆ ಮಾಡಿರುವುದು ಹೆಮ್ಮೆಯ ಸಂಗತಿ ಎಂದರು.

ಮಠದ ಕೊಡುಗೆ ಸ್ಮರಿಸಲಿ ಸರ್ಕಾರ : ರಾಜ್ಯಸಭಾ ಸದಸ್ಯ ಮಾ. ನಾಗರಾಜ ಮಾತನಾಡಿ, ಗುತ್ತಲದ ಕಲ್ಮಠದ ಶ್ರೀಗಳು ಅದ್ಭುತವಾದ, ಚಿರಸ್ಮರಣೀಯ ಕಾರ್ಯ ಮಾಡಿದ್ದಾರೆ. ಮನುಷ್ಯ ಕಾಣುವ ಕನಸು ದೊಡ್ಡದಾಗಿರಬೇಕು. ಅದನ್ನು ನನಸಾಗಿಸಲು ಸತತ ಪ್ರಯತ್ನ ಮಾಡಬೇಕು. ಈ ನಿಟ್ಟಿನಲ್ಲಿ ಗುತ್ತಲದ ಅಭಿವೃದ್ಧಿಗಾಗಿ ಕಲ್ಮಠದಿಂದ ಹತ್ತಾರು ಎಕರೆ ಜಮೀನು ದಾನ ಮಾಡಿರುವುದು ಸಮಾಜದ ಬಗೆಗಿನ ಕಾಳಜಿಗೆ ಸಾಕ್ಷಿಯಾಗಿದೆ. ಮಠದ ತ್ಯಾಗ ಮತ್ತು ಕೊಡುಗೆಯನ್ನು ಸರ್ಕಾರ ಸ್ಮರಿಸುವ ಕಾರ್ಯ ಮಾಡಬೇಕು ಎಂದರು.

ಗೋಸೇವೆಗೆ ಮಠಗಳು ಆದ್ಯತೆ ನೀಡಲಿ: ಯತ್ನಾಳ : ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ವೀರಶೈವ ಮಠಗಳು ಸ್ವಸ್ಥ ಸಮಾಜದ ನಿರ್ಮಾತೃಗಳಾಗಿವೆ. ಸಿದ್ದಗಂಗಾ ಮಠ, ಕೊಪ್ಪಳದ ಗವಿಮಠ ಸೇರಿದಂತೆ ನಾಡಿನ ಅನೇಕ ಮಠಗಳು ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿದ್ದು, ನಾಡಿನ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸಿವೆ. ಇಂತಹ ಮಠಗಳು ಗೋಸೇವೆಗೆ ಹೆಚ್ಚಿನ ಆದ್ಯತೆ ನೀಡಬೇಕು. ದೊಡ್ಡ ದೊಡ್ಡ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಬದಲು ಗೋಶಾಲೆಗಳನ್ನು ನಿರ್ಮಿಸುವತ್ತ ಮಠಾಧೀಶರು ಗಮನಹರಿಸಬೇಕು ಎಂದು ಸಲಹೆ ನೀಡಿದರು.

ವೀರಶೈವ–ಲಿಂಗಾಯತ ಮಠಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಕೊಡುಗೆ ಅಪಾರವಾಗಿದೆ. ಬಸವಣ್ಣನವರ ಹೆಸರು ಹೇಳಿಕೊಂಡು ಸನಾತನ ಧರ್ಮ ಹಾಗೂ ದೇವರುಗಳನ್ನು ಅವಹೇಳನ ಮಾಡುವವರ ನಡುವೆ, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಬಸವಣ್ಣನವರ ಭವ್ಯ ಶಿಲಾಮೂರ್ತಿ ನಿರ್ಮಿಸಿರುವ ಕಲ್ಮಠದ ಶ್ರೀಗಳ ಕಾರ್ಯ ಶ್ಲಾಘನೀಯ. ಅವರು ಬಸವಣ್ಣನವರ ಹೆಸರಿನಲ್ಲಿ ದೇವರುಗಳನ್ನು ಅವಹೇಳನ ಮಾಡದೆ, ಭಕ್ತಿಭಾವದಿಂದ ಮೂರ್ತಿ ಸ್ಥಾಪಿಸಿರುವುದು ವಿಶೇಷ ಎಂದರು.

ಸಂತರು, ಗಣ್ಯರ ಸಮಾಗಮ : ಸಮಾರಂಭದಲ್ಲಿ ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಬೆಳ್ಳಟ್ಟಿಯ ರಾಮಲಿಂಗೇಶ್ವರ ಮಠದ ಬಸವರಾಜ ಸ್ವಾಮೀಜಿ, ಸವಣೂರಿನ ದೊಡ್ಡಹುಣಸೆಕಲ್ಮಠದ ಚನ್ನಬಸವ ಸ್ವಾಮೀಜಿ, ಹತ್ತಿಮತ್ತೂರಿನ ನಿಜಗುಣ ಸ್ವಾಮೀಜಿ, ಹಾವನೂರು ದಳವಾಯಿ ಮಠದ ಶಿವಕುಮಾರ ಸ್ವಾಮೀಜಿ, ಹನಮನಹಳ್ಳಿಯ ಸಿದ್ದರಾಮ ಹಾಲ ಸ್ವಾಮೀಜಿ, ಅಂಬಿಗರ ಚೌಡಯ್ಯ ಮಠದ ಶಾಂತಭೀಷ್ಮ ಸ್ವಾಮೀಜಿ, ಲಿಂಗನಾಯಕನಹಳ್ಳಿಯ ಚನ್ನವೀರ ಸ್ವಾಮೀಜಿ, ಗುಡ್ಡದ ಆನ್ವೇರಿಯ ಶಿವಯೋಗೀಶ್ವರ ಸ್ವಾಮೀಜಿ, ಅಗಡಿ ಅಕ್ಕಿಮಠದ ಗುರುಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಬಂಗಾರು ಹನುಮಂತು, ಮಾಜಿ ಶಾಸಕ ಶಿವರಾಜ ಸಜ್ಜನರ, ಮಾಜಿ ಜಿಪಂ ಸದಸ್ಯ ಸಿದ್ದರಾಜ ಕಲಕೋಟಿ, ಜಿಪಂ ಮಾಜಿ ಅಧ್ಯಕ್ಷ ಕೋಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರ, ಮಾರುತಿ ಗೋರವರ, ಮುತ್ತಣ್ಣ ಯಲಿಗಾರ, ಗವಿಸಿದ್ದಪ್ಪ ದ್ಯಾಮಣ್ಣನವರ, ಎಂ.ಎಂ. ಮೈದೂರ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು, ಮಠಗಳ ಭಕ್ತರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಪ್ರಕಾಶ್ ಸೊಪ್ಪಿನ ಸ್ವಾಗತಿಸಿದರು. ಮಂಜುಳಾ ಕೊಪ್ಪದ ಪ್ರಾರ್ಥಿಸಿದರು. ಮಾರುತಿ ಕೋಡಬಾಳ ಹಾಗೂ ವೀರಯ್ಯ ಪ್ರಸಾದಿಮಠ ನಿರೂಪಿಸಿದರು.

ಸಿದ್ಧಾರೂಢ ಸ್ವಾಮೀಜಿಗಳ ಜೀವನಗಾಥೆ ಅನಾವರಣಗೊಳಿಸಿದ 'ಶಿವ ಅಂಶ್' ಸಾಕ್ಷ್ಯಚಿತ್ರ

ಪಾಂಡವ ನ್ಯೂಸ್, ಹುಬ್ಬಳ್ಳಿ : ಅದ್ಭುತ ತತ್ವಜ್ಞಾನ, ಆಧ್ಯಾತ್ಮಿಕ ಸಾಧನೆ, ತ್ಯಾಗ, ವೈರಾಗ್ಯ ಹಾಗೂ ಮಾನವ ಕಲ್ಯಾಣದ ಸಂದೇಶ ಸಾರಿದ ಪರಮಪೂಜ್ಯ ಶ್ರೀ ಸಿದ್ಧಾರೂಢ ಸ್ವಾಮೀಜಿಗಳ ಜೀವನಗಾಥೆಯನ್ನು ದೃಶ್ಯಮಾಧ್ಯಮದ ಮೂಲಕ ಪರಿಚಯಿಸುವ ಉದ್ದೇಶದಿಂದ ನಿರ್ಮಿಸಿರುವ 'SHIVA ANSH - A Documentary Film on Siddharoodha Swamiji' ಸಾಕ್ಷ್ಯಚಿತ್ರದ ವಿಶೇಷ ಪ್ರದರ್ಶನ ಹಾಗೂ ಲೋಕಾರ್ಪಣೆ ಸಮಾರಂಭ ಶನಿವಾರ ಶ್ರೀ ಸಿದ್ಧಾರೂಢ ಮಠದಲ್

ಗ್ರಂಥಾಲಯ ಸದ್ಬಳಕೆ ಮಾಡಿಕೊಳ್ಳಿ: ಮಂಜುನಾಥ ಭೋವಿ

ಹೂವಿನಹಡಗಲಿಯಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಣೆ

ಪಾಂಡವ ನ್ಯೂಸ್, ಹೂವಿನಹಡಗಲಿ : ಸಾರ್ವಜನಿಕ ಗ್ರಂಥಾಲಯ ಸಾಮಾನ್ಯ ಜನರ ವಿಶ್ವವಿದ್ಯಾಲಯವಿದ್ದಂತೆ. ಜ್ಞಾನಾರ್ಜನೆಗೆ ಗ್ರಂಥಾಲಯಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಖಾ ಗ್ರಂಥಾಲಯಾಧಿಕಾರಿ ಮಂಜುನಾಥ ಭೋವಿ ಹೇಳಿದರು.

ಪಟ್ಟಣದ ಸಾರ್ವಜನಿಕ ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೀಚಿ ಗ್ರಂಥಾಲಯ ಬೆಂಬಲಿಗರ ಬಳಗ ಹಾಗೂ ತಾಲೂಕು ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾರ್ವಜನಿಕ ಗ್ರಂಥಾಲಯದ ಮೊದಲ ಮಹಡಿಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲಾಗಿದೆ. ದಿನಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ ಪುಸ್ತಕಗಳು ಲಭ್ಯವಿದ್ದು, ಯುವಜನತೆ ಮತ್ತು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಬೀಚಿ ಗ್ರಂಥಾಲಯ ಬೆಂಬಲಿಗರ ಬಳಗದ ಅಧ್ಯಕ್ಷ ಸುರೇಶ ಅಂಗಡಿ ಮಾತನಾಡಿ, ಸಪ್ತಾಹದ ಅಂಗವಾಗಿ ವಿವಿಧ ಶಾಲೆಗಳಲ್ಲಿ ಓದಿನ ಮಹತ್ವದ ಕುರಿತು ಜಾಗೃತಿ ಮೂಡಿಸುವುದರ ಜತೆಗೆ ಉತ್ತಮ ಅಭಿರುಚಿ ಬೆಳೆಸುವ ಪುಸ್ತಕಗಳನ್ನು ವಿತರಿಸಲು ಯೋಜಿಸಲಾಗಿದೆ ಎಂದರು.

ಪತ್ರಕರ್ತ ಎಂ. ದಯಾನಂದ ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿಯೇ ಓದುಗರಿಗೆ ಇಂತಹ ಸುಸಜ್ಜಿತ ಗ್ರಂಥಾಲಯ ಲಭ್ಯವಿರುವುದು ವಿಶೇಷ. ಯುವಜನತೆ ಮೊಬೈಲ್ ಗೀಳು ಬಿಟ್ಟು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಬಳಗದ ಹಿರಿಯ ಸದಸ್ಯ ಬೀರಬ್ಬಿ ಬಸವರಾಜ, ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಜಿಲ್ಲಾಧ್ಯಕ್ಷ ಕುರಿ ಮಂಜುನಾಥ, ತಾಲೂಕು ಅಧ್ಯಕ್ಷ ದೊಡ್ಡಬಸಪ್ಪ ಮಾತನಾಡಿದರು.

ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಗರಾಜ ಮಲ್ಲಿಒಡೆಯರ್, ಶಾಖಾ ಗ್ರಂಥಾಲಯಾಧಿಕಾರಿ ಬಿ. ನಾರಾಯಣದಾಸ್, ಶಿಕ್ಷಕ ವಿ.ಎಸ್. ಯೇಸು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸಪ್ತಾಹದ ಅಂಗವಾಗಿ ಇಲಾಖೆಯ ಹೊಸ ಪುಸ್ತಕಗಳ ಪ್ರದರ್ಶನ ಆಯೋಜಿಸಲಾಗಿತ್ತು. ಗ್ರಂಥಾಲಯದ ಓದುಗರು ಭಾಗವಹಿಸಿದ್ದರು.

ರಾಣೆಬೆನ್ನೂರಲ್ಲಿ ಅಂತರ ಕಾಲೇಜುಗಳ ಖೋ. ಖೋ. ಪಂದ್ಯಾವಳಿ ಯಶಸ್ವಿ

ಪಾಂಡವ ನ್ಯೂಸ್, ರಾಣೆಬೆನ್ನೂರು : ಕಾಲೇಜು ವಿದ್ಯಾರ್ಥಿಗಳು ಕೇವಲ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಶಿಕ್ಷಣ ಕಷ್ಟ ಸೀಮಿತವಾಗದೆ ಕಲೆ, ಸಾಹಿತ್ಯ, ಸಂಗೀತ ಮತ್ತು ಸಂಸ್ಕೃತಿಯ ಜೊತೆಗೆ ದೇಶಿಯ ಕ್ರೀಡೆಗಳಿಗೆ ಹೆಚ್ಚಿನ ಮಾನ್ಯತೆ ನೀಡಿ ಅವುಗಳ ಮೂಲಕ ಶಿಖರ ದೈಹಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ಮುಂದಾಗಬೇಕು ಎಂದು ಮ್ಯಾನ್ ಪವರ್ ಡೆವಲಪ್ಮೆಂಟ್ ಸೊಸೈಟಿ ಕಾರ್ಯದರ್ಶಿ ಬಸವರಾಜ್ ತಳವಾರ ಕರೆ ನೀಡಿದರು. ಅವರು ಸೋಮವಾರ ಹಣಸಿಕಟ್ಟಿ ರಸ್ತೆ, ಬಸವೇಶ್ವರ ಪ್ರೌಢಶಾಲಾ ಕ್ರೀಡಾಂಗಣದಲ್ಲಿ ನಡೆದ, ಪುರುಷರ ಅಂತರ ಕಾಲೇಜು ಪಂದ್ಯಾವಳಿ ಹಾಗೂ ವಿಶ್ವವಿದ್ಯಾಲಯ ಖಂಡಗಳ ಆಯ್ಕೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಕ್ರೀಡಾ ಚಟುವಟಿಕೆಗಳು ಯಾವುದೇ ಇರಲಿ ಅವುಗಳು ಮನುಷ್ಯನ ದೀರ್ಘಾಯುಷ್ಯ ಜೀವನ ಬದುಕಿಗೆ ಸಹಕಾರಿಯಾಗಿದೆ ಆರೋಗ್ಯ ಜೀವನಕ್ಕೆ ಬಹು ಮುಖ್ಯ ಪಾತ್ರ ವಹಿಸಲಿವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ, ಹಾವೇರಿ ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಸಿ.ಎಸ್. ಸೊರಟೂರ ಅವರು ಮಾನಸಿಕ ದೈಹಿಕ ಬೌದ್ಧಿಕ ಬೆಳವಣಿಗೆಗೆ ಕ್ರೀಡೆಗಳ ಅತ್ಯಂತ ಸಹಕಾರಿಯಾಗಿದ್ದು ಅವುಗಳ ಮೂಲಕ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳಲು ಸಾಧ್ಯವಿದೆ. ಅಲ್ಲದೆ ಈಡೇರಿ ಸಾಧನೆ ಮಾಡಿದವರಿಗೆ ಭವಿಷ್ಯದಲ್ಲಿ ಎಲ್ಲ ರೀತಿಯ ಅನುಕೂಲತೆಗಳು ದೊರೆಯಲಿವೆ. ವಿಶ್ವವಿದ್ಯಾಲಯ ಇಂತಹ ಕ್ರೀಡೆಗಳ ಆ ಯೋಜನೆಯ ಮೂಲಕ ದೇಶಿಯ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡುತ್ತಲಿದೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ರವಿಕುಮಾರ ನಾಯಕ ಅವರು, ಸಮಾಜದಲ್ಲಿ ಇಂದು ಆಧುನಿಕ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿರುವ ಯುವ ಜನಾಂಗವು, ನೈಜ ಮತ್ತು ನೈಜ ಹಾಗೂ ದೇಶಿಯ ಕ್ರೀಡೆಗಳ ಮೂಲಕ ದೈಹಿಕ ಬೆಳವಣಿಗೆ ಕಾಣಬೇಕಾಗಿದೆ.ಅಧ್ಯಯನದ ಜೊತೆಗೆ ಇಂತಹ ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಂಡು ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುವುದು ಎಂದರು. ಈ ಸಂದರ್ಭದಲ್ಲಿ ಕಾಲೇಜು ಕ್ರೀಡಾ ಸಂಘಟಿಕ ಡಾ. ಎಸ್. ಐ. ಮಲ್ಲಿಗಾರ, ದೈಹಿಕ ಶಿಕ್ಷಣ ನಿರ್ದೇಶಕಿ ಡಾ.ಆಶಾ ಡಿ, ಸಂಚಾಲಕ ಸಂಗಮೇಶ್ವರ ಎನ್.ಎಸ್. ಸಹ ಸಂಚಾಲಕಿ ಡಾ. ಗೀತಾ ಹಾದಿಮನಿ, ಸೇರಿದಂತೆ ಕಾಲೇಜಿನ ಉಪನ್ಯಾಸಕರು, ಮತ್ತು ಪ್ರೌಢಶಾಲೆಯ ಶಿಕ್ಷಕರು ಸಿಬ್ಬಂದಿ ಉಪಸ್ಥಿತರಿದ್ದರು.ಸ್ಕೌಟ್ಸ್ ಗೇಟ್ಸ್ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪ್ರೊ.ಬೆಳ್ಳುಳ್ಳಿ ಕೊಟ್ರೇಶ್ ಸ್ವಾಗತಿಸಿದರು. ಪ್ರೊ. ಗೋವಿಂದಪ್ಪ ಬಿ.ಜಿ, ನಿರೂಪಿಸಿ ಪ್ರೊ. ಸಿ. ಎಂ. ಕಂಬಳಿ, ವಂದಿಸಿದರು. ಮುಂಜಾನೆಯಿಂದ ಸಂಜೆಯವರೆಗೂ ನಡೆದ ಪುರುಷರ ಅಂತರ ಕಾಲೇಜು ಮಟ್ಟದ ಖೋ. ಖೋ. ಪಂದ್ಯಾವಳಿಯಲ್ಲಿ ಒಟ್ಟು 7ತಂಡಗಳು ಭಾಗವಹಿಸಿದ್ದವು. ಅದರಲ್ಲಿ ಬ್ಯಾಡಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಪ್ರಥಮ) ರಾಣೆಬೆನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ದ್ವಿತೀಯ) ಹಾಗೂ ರಾಣೆಬೆನ್ನೂರು ಆರ್. ಟಿ. ಎಸ್. ಕಾಲೇಜ್, ತೃತಿಯ ಸ್ಥಾನ ಗಳಿಸಿತು. ಸಮಾರೋಪ :– ಖೋ. ಖೋ ಪಂದ್ಯಾವಳಿ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ಇಂದು 17ರಂದು ಮಂಗಳವಾರ ಮುಂಜಾನೆ 10 ಗಂಟೆಗೆ ನಡೆಯಲಿದೆ.



ನಮ್ಮ ಕನ್ನಡ ಭಾಷೆಯಪರಂಪರೆ ಮುಂದಿನ ಪೀಳಿಗೆಗೆ ಪರಿಚಯಿಸುವುದು ಅಗತ್ಯ: ಮಹಾದೇವಸ್ವಾಮಿ

ಪಾಂಡವ ನ್ಯೂಸ್, ಬಂಕಾಪುರ : ಕನ್ನಡ ಭಾಷೆಯ ಶ್ರೀಮಂತ ಪರಂಪರೆ ಹಾಗೂ ನಾಡಿನ ಸಾಂಸ್ಕೃತಿಕ ವೈಭವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದರ ಜತೆಗೆ ವಿದ್ಯಾರ್ಥಿಗಳಲ್ಲಿ ಕನ್ನಡದ ಬಗ್ಗೆ ಅಭಿಮಾನ ಮತ್ತು ಆತ್ಮಗೌರವ ಬೆಳೆಸುವಲ್ಲಿ ಕನ್ನಡ ಜಾಗೃತಿ ಅಭಿಯಾನಗಳು ಅರ್ಥಪೂರ್ಣ ಕಾರ್ಯಗಳಾಗಿವೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಹಾದೇವಸ್ವಾಮಿ ಹೇಳಿದರು. ಜ್ಞಾನ ವಿಕಾಸ ಟ್ರಸ್ಟ್, ನಾರಾಯಣಪುರ ಹಾಗೂ ಬಂಕಾಪುರದ ಎಸ್.ಎ.ಕ್ಯೂ. ಪದವಿಪೂರ್ವ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 'ನನ್ನ ಕನಸಿನ ಕರ್ನಾಟಕ' ವಿಶೇಷ ಉಪನ್ಯಾಸ ಮಾಲಿಕೆಯ ಐದನೇ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಕೇವಲ ಕನಸು ಕಾಣುವುದಷ್ಟೇ ಅಲ್ಲದೆ, ಜ್ಞಾನ, ಪರಿಶ್ರಮ, ಸೃಜನಶೀಲತೆ ಹಾಗೂ ಸಾಮಾಜಿಕ ಹೊಣೆಗಾರಿಕೆಯ ಮೂಲಕ ಕನಸಿನ ಕರ್ನಾಟಕ ನಿರ್ಮಿಸುವ ಸಂಕಲ್ಪ ಮಾಡಬೇಕು. ಕನ್ನಡ ಭಾಷೆ, ನೆಲ, ಜಲ ಹಾಗೂ ಸಂಸ್ಕೃತಿಯ ಸಂರಕ್ಷಣೆಯಲ್ಲಿ ಯುವಜನತೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕನ್ನಡಿಗರ ಇತಿಹಾಸ ಹಾಗೂ ವೀರ ಪರಂಪರೆ ಕುರಿತು ಉಪನ್ಯಾಸ ನೀಡಿದ ಶಿಗ್ಗಾವಿಯ ಶ್ರೀ ಚನ್ನಪ್ಪ ಕುನ್ನೂರ ಕಾಲೇಜಿನ ಉಪನ್ಯಾಸಕ ಎಂ.ಎಸ್. ಕುರಂದವಾಡ ಮಾತನಾಡಿ, 18 ಅರಸು ಮನೆತನಗಳ ಭವ್ಯ ಇತಿಹಾಸ ಹಾಗೂ ವೀರ ಪರಂಪರೆಯನ್ನು ಹೊಂದಿರುವ ಕನ್ನಡ ನಾಡಿನ ಗತವೈಭವ ಇಂದಿನ ಯುವಜನತೆಗೆ ಸ್ಫೂರ್ತಿದಾಯಕವಾಗಿದೆ ಎಂದರು.

ಆಶಯ ನುಡಿಗಳನ್ನಾಡಿದ ಪ್ರಾಚಾರ್ಯ ಡಾ. ನಾಗರಾಜ ಜಿ. ದ್ಯಾಮನಕೊಪ್ಪ, ಪದವಿಪೂರ್ವ ವಿದ್ಯಾರ್ಥಿಗಳನ್ನು ಕೇಂದ್ರವಾಗಿಟ್ಟುಕೊಂಡು ಶಿಗ್ಗಾವಿ ತಾಲ್ಲೂಕಿನ 12 ಕಾಲೇಜುಗಳಲ್ಲಿ ಹಮ್ಮಿಕೊಂಡಿರುವ ಕನ್ನಡ ಜಾಗೃತಿ ಅಭಿಯಾನದ ಚಟುವಟಿಕೆಗಳು, ಉಪನ್ಯಾಸಗಳ ಆಶಯ ಹಾಗೂ ವಿದ್ಯಾರ್ಥಿಗಳ ಆಯ್ದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶವಿದೆ ಎಂದರು. ಬಂಕಾಪುರ ಅಂಜುಮನ್ ಸಂಸ್ಥೆಯ ಕಾರ್ಯದರ್ಶಿ ನ್ಯಾಯವಾದಿ ತಹಮೀದ್ ಖಾಜಿ ಮಾತನಾಡಿ, ಭಾಷೆ ಮತ್ತು ಸಂಸ್ಕೃತಿಗೆ ಧರ್ಮದ ಗಡಿಗಳಿಲ್ಲ. ಕನ್ನಡವನ್ನು ಧರ್ಮ ಹಾಗೂ ಜಾತಿಗೆ ಸೀಮಿತಗೊಳಿಸದೆ ಪ್ರತಿಯೊಬ್ಬರೂ ಪ್ರೀತಿಸಿ, ಗೌರವಿಸುವ ಮೂಲಕ ಕನ್ನಡದ ಅಸ್ಮಿತೆಯನ್ನು ಎತ್ತಿಹಿಡಿಯಬೇಕು ಎಂದರು. ಅಂಜುಮನ್ ಸಂಸ್ಥೆಯ ಅಧ್ಯಕ್ಷ ಮೊಹಮ್ಮದ್ ಹುಸೇನ್ ಖತೀಬ್ ಅಧ್ಯಕ್ಷತೆ ವಹಿಸಿದ್ದರು. ಎಸ್.ಎ.ಕ್ಯೂ. ಕಾಲೇಜಿನ ಪ್ರಾಚಾರ್ಯ ಟಿ.ಎನ್. ಪಠಾಣ, ಉಪನ್ಯಾಸಕರಾದ ಸೋಫಿಯಾ ರಾಮಗೇರಿ, ಸನಾ ಶಿರಹಟ್ಟಿ, ಜಾಫರ್ ಆಲದಕಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಉಪನ್ಯಾಸಕಿ ನಂದಾ ಕಬ್ಬೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌಸ್ ರೋಣ ವಂದಿಸಿದರು. ಮುಜಫರ್ ಕಲ್ಯಾಣ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

ಬರದ ಸಂಕಷ್ಟಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿ: ಜಾನುವಾರುಗಳಿಗೆ ಗೋಶಾಲೆ ಆಸರೆ



ಪಾಂಡವ ನ್ಯೂಸ್, ಚಿತ್ರದುರ್ಗ : ಬರಗಾಲದ ಸಂದರ್ಭದಲ್ಲಿ ರೈತರ ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ವಹಿಸಿರುವ ಜಿಲ್ಲಾಧಿಕಾರಿ ಎಸ್. ರಮ್ಯಾ, ಹಿರಿಯೂರು ತಾಲೂಕಿನ ಜವನಗೊಂಡನಹಳ್ಳಿ ಸಮೀಪದ ಗಾಯತ್ರಿ ಜಲಾಶಯದ ಬಳಿಯ ಕರಿಯಾಲ ಗ್ರಾಮದಲ್ಲಿ ನೂತನ ಗೋಶಾಲೆ ಸ್ಥಾಪನೆಗೆ ಕ್ರಮ ಕೈಗೊಂಡಿದ್ದಾರೆ.

ಜಿಲ್ಲಾಡಳಿತದ ವತಿಯಿಂದ ನಿರ್ಮಿಸಲಾದ ಗೋಶಾಲೆಯನ್ನು ಭಾನುವಾರ ಉದ್ಘಾಟಿಸಿದ ಜಿಲ್ಲಾಧಿಕಾರಿ, ಜಾನುವಾರುಗಳಿಗೆ ಮೇವು ವಿತರಿಸುವ ಮೂಲಕ ಕಾರ್ಯಾರಂಭಕ್ಕೆ ಚಾಲನೆ ನೀಡಿದರು.

ಜಾನುವಾರುಗಳ ರಕ್ಷಣೆಗೆ ಆದ್ಯತೆ : ಬರಗಾಲದ ಪರಿಣಾಮ ಕೃಷಿ ಚಟುವಟಿಕೆಗಳ ಜತೆಗೆ ಪಶುಸಂಗೋಪನೆಯೂ ಸಂಕಷ್ಟಕ್ಕೆ ಸಿಲುಕುತ್ತದೆ. ಮಳೆ ಕೊರತೆಯಿಂದ ಹೊಲಗಳಲ್ಲಿ ಮೇವು ಉತ್ಪಾದನೆ ಕುಂಠಿತಗೊಂಡು, ಜಾನುವಾರುಗಳಿಗೆ ಆಹಾರ ಮತ್ತು ನೀರು ಒದಗಿಸುವುದು ರೈತರಿಗೆ ಸವಾಲಾಗುತ್ತದೆ. ಇಂತಹ ಸಂದರ್ಭದಲ್ಲಿ ಜಾನುವಾರುಗಳನ್ನು ಅನಿವಾರ್ಯವಾಗಿ ಮಾರಾಟ ಮಾಡುವ ಅಥವಾ ದೂರದ ಪ್ರದೇಶಗಳಿಗೆ ಕರೆದೊಯ್ಯುವ ಪರಿಸ್ಥಿತಿ ಎದುರಾಗುತ್ತದೆ.

ಇದನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾಧಿಕಾರಿ ಎಸ್. ರಮ್ಯಾ ಅವರು ಜಾನುವಾರುಗಳಿಗೆ ಸುರಕ್ಷಿತ ಆಶ್ರಯ, ಮೇವು ಮತ್ತು ನೀರಿನ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಗೋಶಾಲೆ ಆರಂಭಿಸಲು ಕ್ರಮ ಕೈಗೊಂಡಿದ್ದಾರೆ. ಗೋಶಾಲೆಯ ಸ್ಥಾಪನೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗುವ ಜತೆಗೆ ಜಾನುವಾರುಗಳ ಸಂರಕ್ಷಣೆಗೆ ಸಹಕಾರಿಯಾಗಲಿದೆ ಎಂಬ ನಿರೀಕ್ಷೆಯಿದೆ.

ಅಧಿಕಾರಿಗಳ ಸಮನ್ವಯಕ್ಕೆ ಒತ್ತು : ಗೋಶಾಲೆ ಸ್ಥಾಪನೆ ಮತ್ತು ಕಾರ್ಯಾರಂಭಕ್ಕೆ ಕಂದಾಯ ಹಾಗೂ ಪಶುಸಂಗೋಪನಾ ಇಲಾಖೆ ಅಧಿಕಾರಿಗಳ ಸಹಕಾರ ಪಡೆಯಲಾಗಿದೆ. ಜಾನುವಾರುಗಳಿಗೆ ಅಗತ್ಯ ಸೌಲಭ್ಯ ಒದಗಿಸುವ ಉದ್ದೇಶದಿಂದ ಜಿಲ್ಲಾಡಳಿತ ಕೈಗೊಂಡಿರುವ ಈ ಕ್ರಮಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಗೋಶಾಲೆಯ ಉದ್ಘಾಟನೆ ಬಳಿಕ ಜಿಲ್ಲಾಧಿಕಾರಿ ಹಾಗೂ ಅಧಿಕಾರಿಗಳು ಜಾನುವಾರುಗಳಿಗೆ ಮೇವು ವಿತರಿಸಿದರು. ಈ ಮೂಲಕ ಗೋಶಾಲೆಯ ಸೇವೆಗೆ ಅಧಿಕೃತ ಚಾಲನೆ ದೊರೆಯಿತು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಡಾ. ಕೆ.ಜೆ. ಕಾಂತರಾಜ್, ತಹಸೀಲ್ದಾರ್ ಸಿದ್ದೇಶ್, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಸಿ. ತಿಪ್ಪೇಸ್ವಾಮಿ, ಸಹಾಯಕ ನಿರ್ದೇಶಕ ಡಾ. ರಮೇಶ್, ಪಶು ಪರೀಕ್ಷಕ ಲೋಹಿತಾಶ್ವ, ಕಂದಾಯ ಮತ್ತು ಪಶುಸಂಗೋಪನಾ ಇಲಾಖೆ ಸಿಬ್ಬಂದಿ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಡಾ. ಅಂಜಿನಪ್ಪಗೆ 'ಸಮಾಜ ಸೇವಾ ರತ್ನ' ಪ್ರಶಸ್ತಿ

ಪಾಂಡವ ನ್ಯೂಸ್, ದಾವಣಗೆರೆ : ಸಮಾಜ ಸೇವೆ, ಗ್ರಾಮೀಣ ಅಭಿವೃದ್ಧಿ ಹಾಗೂ ಶೈಕ್ಷಣಿಕ ಸಂಶೋಧನಾ ಕ್ಷೇತ್ರದ ಸಾಧನೆ ಗುರುತಿಸಿ ದಾವಣಗೆರೆಯ ಡಾ. ಅಂಜಿನಪ್ಪ ಡಿ. ಅವರಿಗೆ 2026ನೇ ಸಾಲಿನ 'ಸಮಾಜ ಸೇವಾ ರತ್ನ ರಾಜ್ಯ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ.

ಬೆಂಗಳೂರಿನ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ನ.15ರಂದು ಕನ್ನಡ ಹಬ್ಬ–2026ರ ಅಂಗವಾಗಿ ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಷ್ಠಾನದ ಅಧ್ಯಕ್ಷ ಮಂಜುನಾಥ ಗುಣವಂತ ಪ್ರಶಸ್ತಿ ಪ್ರದಾನ ಮಾಡಿದರು.

ಸಮಾಜಕಾರ್ಯದಲ್ಲಿ ಎಂ.ಎಸ್.ಡಬ್ಲ್ಯು. ಪದವಿ ಹಾಗೂ ದಾವಣಗೆರೆ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪಡೆದಿರುವ ಅಂಜಿನಪ್ಪ, ಗ್ರಾಮೀಣ ಘನತ್ಯಾಜ್ಯ ನಿರ್ವಹಣೆ ಕುರಿತು ಸಂಶೋಧನೆ ನಡೆಸಿದ್ದಾರೆ.

ಸಂಕಲ್ಪ ಫೌಂಡೇಶನ್ ಸ್ಥಾಪಿಸಿ ಗ್ರಾಮೀಣ ಮಕ್ಕಳ ಶಿಕ್ಷಣ, ಉಚಿತ ಕಂಪ್ಯೂಟರ್ ತರಬೇತಿ, ಮಹಿಳಾ ಸಬಲೀಕರಣ, ಮಕ್ಕಳ ಹಕ್ಕುಗಳ ರಕ್ಷಣೆ, ಆರೋಗ್ಯ ಜಾಗೃತಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ತೊಡಗಿದ್ದಾರೆ.

ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋ ಆಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ, ಸರ್ಕಾರಿ ಯೋಜನೆಗಳ ಜಾಗೃತಿ ಮತ್ತು ವೈಜ್ಞಾನಿಕ ತ್ಯಾಜ್ಯ ನಿರ್ವಹಣೆಗೆ ಜನಸಹಭಾಗಿತ್ವ ಹೆಚ್ಚಿಸುವ ಕಾರ್ಯ ನಿರ್ವಹಿಸುತ್ತಿದ್ದಾರೆ.

ಅವರ ಸಾಧನೆಗೆ ಕುಟುಂಬದವರು, ಸ್ನೇಹಿತರು, ಮಾರ್ಗದರ್ಶಕರು ಹಾಗೂ ಹಿತೈಷಿಗಳು ಅಭಿನಂದಿಸಿದ್ದಾರೆ.

ಕರ್ನಾಟಕ ರಾಜ್ಯ ಪ್ರೊಫೆಶನಲ್ ಸೋಷಿಯಲ್ ವರ್ಕರ್ ವೆಲ್‌ಫೇರ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್ ಎಂ. ಹರ್ಷ ವ್ಯಕ್ತಪಡಿಸಿದ್ದಾರೆ.




ಡಾ. ಬಸವರಾಜ ಕೆ. ಅವರಿಗೆ 'ಸಾಹಿತ್ಯ ಭೂಷಣ' ಗೌರವ



ಪಾಂಡವ ನ್ಯೂಸ್, ಹೊಸಪೇಟೆ : ಮುದ್ದಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಂ. 88ರ ಮುಖ್ಯಗುರು ಡಾ. ಬಸವರಾಜ ಕೆ. ಅವರಿಗೆ ಸಾಹಿತ್ಯ ಮತ್ತು ನಿರೂಪಣಾ ಕ್ಷೇತ್ರದ ಸಾಧನೆ ಗುರುತಿಸಿ 'ಸಾಹಿತ್ಯ ಭೂಷಣ' ಪುರಸ್ಕಾರ ನೀ

ಮನೆ ಹೊಕ್ಕು ನೋಡುವುದಕ್ಕಿಂತ ಮನಹೊಕ್ಕು ನೋಡೋಣ



ಇಂದಿನ ಧಾವಂತದ ಮತ್ತು ಯಾಂತ್ರಿಕ ಬದುಕಿನಲ್ಲಿ ಮನುಷ್ಯನು ಹೊರನೋಟಕ್ಕೆ ಅದೆಷ್ಟೋ ಸುಂದರವಾದ, ಅಚ್ಚುಕಟ್ಟಾದ ಮತ್ತು ಬೃಹತ್ ಆದ 'ಮನೆ'ಗಳನ್ನು ಕಟ್ಟಿಕೊಳ್ಳುತ್ತಿದ್ದಾನೆ. ಆದರೆ ಆ ಭವ್ಯವಾದ ಗೋಡೆಗಳ ಒಳಗೆ ವಾಸಿಸುವ ವ್ಯಕ್ತಿಗಳ ಮನಸ್ಸುಗಳು ಮಾತ್ರ ದಿನದಿಂದ ದಿನಕ್ಕೆ ಒಂಟಿತನ, ಅಪನಂಬಿಕೆ, ಮತ್ತು ಪ್ರತ್ಯೇಕತೆಯ ಕಂದಕಕ್ಕೆ ಜಾರುತ್ತಿವೆ. "ಮನೆ ಹೊಕ್ಕು ನೋಡುವುದಕ್ಕಿಂತ ಮನಹೊಕ್ಕು ನೋಡೋಣ" ಎಂಬ ಮಾತು ಇಂದಿನ ಸಾಮಾಜಿಕ ಮತ್ತು ಮಾನಸಿಕ ಬಿಕ್ಕಟ್ಟಿಗೆ ಒಂದು ಅತ್ಯಮೂಲ್ಯ ದರ್ಶನ ನೀಡುತ್ತದೆ. ಈ ಲೇಖನವು ಕೇವಲ ಇಟ್ಟಿಗೆ–ಸಿಮೆಂಟಿನ ಕಟ್ಟಡಗಳ ಆಚೆಗಿನ ಮಾನವೀಯ ಸ್ಪರ್ಶವನ್ನು ಮತ್ತು ಅಂತಃಕರಣದ ಹುಡುಕಾಟವನ್ನು ಪತ್ರಿಕೆಯ ಓದುಗರ ಮುಂದೆ ತೆರೆದಿಡುತ್ತದೆ.

ಇಟ್ಟಿಗೆಗಳ ಮನೆಯೂ ಮತ್ತು ಬದುಕಿನ ಒಂಟಿತನವೂ : ನಾವು ಇಂದು ವಾಸಿಸುತ್ತಿರುವ ಮನೆಗಳು ಅತ್ಯಾಧುನಿಕವಾಗಿವೆ. ಕಾಂಕ್ರೀಟ್ ಕಾಡಿನಲ್ಲಿ ಹವಾನಿಯಂತ್ರಿತ ಕೋಣೆಗಳು, ಬೆಲೆಬಾಳುವ ಪೀಠೋಪಕರಣಗಳು ಮತ್ತು ಆಧುನಿಕ ಗೃಹೋಪಯೋಗಿ ವಸ್ತುಗಳಿಂದ ನಮ್ಮ ಮನೆಗಳು ಕಂಗೊಳಿಸುತ್ತಿವೆ. ಹೊರಗಿನಿಂದ ನೋಡುವವರಿಗೆ ಈ ಮನೆಗಳೇ ಅಂತಿಮ ಸುಖದ ನೆಲೆವೀಡುಗಳಂತೆ ಭಾಸವಾಗುತ್ತವೆ. ಆದರೆ, ಆ ಮನೆಗಳ ಒಳಗೆ ಕಾಲಿಟ್ಟಾಗ ಸಿಗುವುದು ಸದ್ದಿಲ್ಲದ ಮೌನ ಮತ್ತು ಪರಸ್ಪರ ಮಾತುಗಳೇ ಇಲ್ಲದ ಅಂತರ.

ಒಂದು ಕಾಲದಲ್ಲಿ ಹಳ್ಳಿಗಳಲ್ಲಿ ಸಣ್ಣದಾದ ಒಲೆಯ ಹಂಚಿನ ಮನೆಗಳಿದ್ದವು. ಅಲ್ಲಿ ಬಾಗಿಲುಗಳಿಗೆ ಬೀಗಗಳೇ ಇರುತ್ತಿರಲಿಲ್ಲ; ನೆರೆಹೊರೆಯವರ ನಡುವೆ ಮನಸ್ಸುಗಳ ಬಾಗಿಲುಗಳು ಸದಾ ತೆರೆದಿರುತ್ತಿದ್ದವು. ಇಂದು ಮನೆಗಳ ಬಾಗಿಲಿಗೆ ಹೈಟೆಕ್ ಲಾಕ್‌ಗಳಿವೆ, ಸಿಸಿಟಿವಿ ಕ್ಯಾಮೆರಾಗಳಿವೆ. ಆದರೆ ಆ ಭದ್ರತೆಯ ಗೋಡೆಯ ಹಿಂದೆ ಮನುಷ್ಯ ಮನುಷ್ಯರ ನಡುವಿನ ಭಾವನಾತ್ಮಕ ಸೇತುವೆ ಕಳಚಿಹೋಗಿದೆ. 'ಮನೆ ಹೊಕ್ಕು ನೋಡು' ಎಂದರೆ ಕೇವಲ ಆಸ್ತಿ–ಅಂತಸ್ತುಗಳನ್ನು ಅಳೆಯುವ ಕಣ್ಣುಗಳು. ಆದರೆ 'ಮನಹೊಕ್ಕು ನೋಡು' ಎಂದರೆ ಮತ್ತೊಬ್ಬರ ನೋವು–ನಲಿವುಗಳಿಗೆ ಸ್ಪಂದಿಸುವ ಸೂಕ್ಷ್ಮ ಹೃದಯ.

ಮನೋವೈಜ್ಞಾನಿಕ ದೃಷ್ಟಿಕೋನ: ಹೊರನೋಟದ ಹದಗೆಟ್ಟ ಸುಖ : ಮನೋವಿಜ್ಞಾನದ ಪ್ರಕಾರ, ಮನುಷ್ಯನಿಗೆ ಮೂಲಭೂತವಾಗಿ ಮೂರು ಅಗತ್ಯಗಳಿವೆ: ದೈಹಿಕ ಭದ್ರತೆ, ಸಾಮಾಜಿಕ ಸ್ವೀಕೃತಿ ಮತ್ತು ಭಾವನಾತ್ಮಕ ಭದ್ರತೆ. ಇಂದಿನ ಆಧುನಿಕ ಸಮಾಜವು ಮೊದಲನೆಯದನ್ನು (ದೈಹಿಕ ಸೌಕರ್ಯ) ಸಂಪೂರ್ಣವಾಗಿ ಒದಗಿಸಿದ್ದರೂ, ಮೂರನೆಯದಾದ 'ಭಾವನಾತ್ಮಕ ಭದ್ರತೆ'ಯನ್ನು ಒದಗಿಸುವಲ್ಲಿ ವಿಫಲವಾಗಿದೆ.

ಭಾವನಾತ್ಮಕ ಒಂಟಿತನ : ಹತ್ತಾರು ಜನರ ಮಧ್ಯೆ ಇದ್ದರೂ ನಮ್ಮನ್ನು ಅರ್ಥಮಾಡಿಕೊಳ್ಳುವವರು ಯಾರೂ ಇಲ್ಲ ಎಂಬ ಭಾವನೆ ಇಂದು ಯುವಜನತೆ ಮತ್ತು ಹಿರಿಯರನ್ನು ಕಾಡುತ್ತಿದೆ.

ಅಹಂಕಾರದ ಪರದೆಗಳು:* ಮನುಷ್ಯನು ತನ್ನ ಆರ್ಥಿಕ ಸ್ಥಿತಿಗತಿ, ಅಂತಸ್ತು ಮತ್ತು ಬೌದ್ಧಿಕ ಅಹಂಕಾರದ ಮುಖವಾಡಗಳನ್ನು ಧರಿಸಿ ಬದುಕುತ್ತಿದ್ದಾನೆ. ಈ ಮುಖವಾಡಗಳ ಹಿಂದೆ ಹೆದರಿರುವ, ಅಳುತ್ತಿರುವ ಒಂದು ಹಸುಗೂಸಿನಂತಹ ಮನಸ್ಸು ಇರುತ್ತದೆ. ಅದನ್ನು ಹೊರಗಿನ ಭವ್ಯ ಮನೆಗಳು ಮರೆಮಾಚುತ್ತವೆ.

ಮನೆಗಳ ಒಳಗೆ ಹೋದಾಗ ನಮಗೆ ಕೇವಲ ಭೌತಿಕ ವಸ್ತುಗಳ ಪ್ರದರ್ಶನ ಸಿಗುತ್ತದೆಯೇ ಹೊರತು ಆತ್ಮೀಯತೆಯ ಸಮಾಧಾನ ಸಿಗುವುದಿಲ್ಲ. ಅದಕ್ಕಾಗಿಯೇ ನಾವು ಭೌತಿಕ ಗಡಿಗಳನ್ನು ಮೀರಿ ಮತ್ತೊಬ್ಬರ ಮನಸ್ಸಿನ ಅಂಗಳಕ್ಕೆ ಕಾಲಿಡಬೇಕಿದೆ.

3. ಕರುಣೆಯೇ ನಿಜವಾದ ನೆಲೆವೀಡು : "ಮನೆ ಹೊಕ್ಕು ನೋಡು" ಎಂದರೆ ಮತ್ತರ, ಪರೀಕ್ಷೆ ಮತ್ತು ಟೀಕೆಯ ದೃಷ್ಟಿ. "ಮನಹೊಕ್ಕು ನೋಡು" ಎಂದರೆ ಪ್ರೀತಿ, ಕ್ಷಮೆ ಮತ್ತು ಸಹಾನುಭೂತಿಯ ದೃಷ್ಟಿ. ನಮ್ಮ ಸುತ್ತಮುತ್ತ ಇರುವ ಎಷ್ಟೋ ಜನ ಮೇಲ್ನೋಟಕ್ಕೆ ನಗುನಗುತ್ತಾ, ಅತಿ ಆತ್ಮವಿಶ್ವಾಸದಿಂದ ಕಾಣಿಸಬಹುದು. ಆದರೆ ಅವರ ಮನಸ್ಸಿನ ಆಳದಲ್ಲಿ ಆರ್ಥಿಕ ಒತ್ತಡಗಳು, ಅನಾರೋಗ್ಯ, ಕೌಟುಂಬಿಕ ಬಿರುಕುಗಳು ಅಥವಾ ಒಂಟಿತನದ ಗೋಳು ಇರಬಹುದು.

ನಾವು ಅವರ ಮನೆಗಳಿಗೆ ಹೋಗಿ ಅವರ ಐಶ್ವರ್ಯವನ್ನು ಮೆಚ್ಚುವುದಕ್ಕಿಂತ, ಅವರ ಮನಸ್ಸಿನ ನೋವನ್ನು ಅರಿತು ಒಂದು ಸಾಂತ್ವನದ ಮಾತು ಆಡುವುದರಿಂದ ಸಿಗುವ ತೃಪ್ತಿ ಅನನ್ಯ.

ಬಸವಾದಿ ಶರಣರು ಮತ್ತು ಸೂಫಿ ಸಂತರು ಜಗತ್ತಿಗೆ ಸಾರಿದ ಸಂದೇಶವೂ ಅದೇ ಆಗಿದೆ. ದೇವರು ಅಥವಾ ಸತ್ಯವು ಕಲ್ಲಿನ ಗುಡಿಗಳಲ್ಲೋ ಅಥವಾ ಭವ್ಯ ಅರಮನೆಗಳಲ್ಲೋ ಇಲ್ಲ; ಅದು ಪ್ರತಿಯೊಬ್ಬ ಮನುಷ್ಯನ ಶುದ್ಧ ಮನಸ್ಸಿನಲ್ಲಿದೆ. ಮನಸ್ಸಿನೊಳಗೆ ಇಳಿದು ನೋಡಿದಾಗ ಮಾತ್ರ ಮತ್ತೊಬ್ಬರ ಕಣ್ಣೀರ ಕಥೆಗಳು ನಮಗೆ ಗೋಚರಿಸುತ್ತವೆ.

ಬದಲಾಗಬೇಕಾದ ದೃಷ್ಟಿಕೋನ : ಇಂದಿನ ಪತ್ರಿಕೆಗಳು ಮತ್ತು ಮಾಧ್ಯಮಗಳಲ್ಲಿ ಕೇವಲ ಭೌತಿಕ ಸಾಧನೆಗಳು, ಕಟ್ಟಡಗಳ ಉದ್ಘಾಟನೆಗಳು ಮತ್ತು ಆರ್ಥಿಕ ಯಶಸ್ಸಿನ ಸುದ್ದಿಗಳೇ ತುಂಬಿ ತುಳುಕುತ್ತಿವೆ. ಆದರೆ ಮಾನವೀಯ ಮೌಲ್ಯಗಳ ಅಂತರ್ಧಾರೆಯು ಕಮ್ಮಿಯಾಗುತ್ತಿದೆ. ನಾವು ನಮ್ಮ ಮಕ್ಕಳಿಗೂ ಕೂಡ ಬದುಕಿನಲ್ಲಿ ದೊಡ್ಡ ಮನೆಗಳನ್ನು ಕಟ್ಟುವುದು ಹೇಗೆ ಎಂಬುದನ್ನು ಕಲಿಸುತ್ತಿದ್ದೇವೆಯೇ ಹೊರತು, ದೊಡ್ಡ ಮನಸ್ಸುಗಳನ್ನು ಹೊಂದುವುದು ಹೇಗೆ ಎಂಬುದನ್ನು ಕಲಿಸುತ್ತಿಲ್ಲ.

ಸಂವಾದಗಳ ಪುನರುಜ್ಜೀವನ:* ದಿನಕ್ಕೊಮ್ಮೆಯಾದರೂ ಕುಟುಂಬದ ಸದಸ್ಯರೊಂದಿಗೆ, ಸ್ನೇಹಿತರೊಂದಿಗೆ ಯಾವುದೇ ಮುಜುಗರವಿಲ್ಲದೆ ಮನಬಿಚ್ಚಿ ಮಾತನಾಡುವ ವಾತಾವರಣ ನಿರ್ಮಿಸೋಣ.

* *ಕೃತಕತೆಯಿಂದ ಮುಕ್ತಿ:* ಮೊಬೈಲ್ ಸ್ಕ್ರೀನ್‌ಗಳ ಮೈಯೊಳಗೆ ಕಳೆದುಹೋಗಿರುವ ನಮ್ಮ ಕಣ್ಣುಗಳನ್ನು ಹೊರಗೆ ತೆಗೆದು, ಪಕ್ಕದ ಮನೆಯವರ, ಸಹೋದ್ಯೋಗಿಗಳ ಮುಖದಲ್ಲಿನ ನಗು ಅಥವಾ ಕಣ್ಣೀರನ್ನು ಓದುವ ಪ್ರಯತ್ನ ಮಾಡೋಣ.

ಮನೆ ಕಟ್ಟುವುದು ದೊಡ್ಡದಲ್ಲ, ಅಲ್ಲಿ ನೆಮ್ಮದಿಯ ನಗು ಅರಳಿಸುವುದು ದೊಡ್ಡದು. ಹಾಗೆಯೇ, ವ್ಯಕ್ತಿಯೊಬ್ಬನ ಐಶ್ವರ್ಯವನ್ನು ನೋಡಿ ಬೆರಗಾಗುವುದಕ್ಕಿಂತ, ಆತನ ಸಂಕಷ್ಟದ ಕಾಲದಲ್ಲಿ ಆತನ ಮನಸ್ಸನ್ನು ಅರಿತು ಆಸರೆಯಾಗುವುದು ನಿಜವಾದ ಮಾನವೀಯತೆ.

ಬನ್ನಿ, ಇಂದಿನಿಂದ ಕೇವಲ ಪರರ ಮನೆಗಳನ್ನು ಹೊಕ್ಕು ಅವರ ಐಭೋಗಗಳನ್ನು ನೋಡಿ ಅಸೂಯೆ ಪಡುವ ಬದಲು, ಪರಸ್ಪರರ ಮನಹೊಕ್ಕು ನೋಡಿ ಪ್ರೀತಿ ಮತ್ತು ವಿಶ್ವಾಸದ ದೀಪ ಹಚ್ಚೋಣ. ಆಗ ಈ ಬದುಕು ಕೇವಲ ಬದುಕುವುದಕ್ಕಾಗಿ ಅಲ್ಲದೆ, ಅರ್ಥಪೂರ್ಣವಾಗಿ ಅನುಭವಿಸುವುದಕ್ಕಾಗಿ ಎಂಬ ಸತ್ಯ ಅರಿವಿಗೆ ಬರುತ್ತದೆ.

ಡಾ. ಪ್ರಸನ್ನ ದೇವರಮಠ ಅನಿಲಕುಮಾರ, ಮಾಗಳ
ಪದವೀಧರ ಪ್ರಾಥಮಿಕ ಶಿಕ್ಷಕರು,
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮುದೇನೂರು.



ಇಲಾಖೆಗಳ ಪ್ರಗತಿ ಸಾಧನೆಗೆ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ: ಸಚಿವ ಬಸವರಾಜ ರಾಯರಡ್ಡಿ

ಪಾಂಡವ ನ್ಯೂಸ್, ಗದಗ : ಜಿಲ್ಲೆಯಲ್ಲಿ ವಿವಿಧ ಇಲಾಖೆಗಳ ಮೂಲಕ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಪ್ರಗತಿ ಸಾಧನೆಗೆ ಅಧಿಕಾರಿಗಳು ಹೆಚ್ಚಿನ ಆಸಕ್ತಿ ಮತ್ತು ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು. ಇಲಾಖೆಗೆ ದೊರೆತ ಅವಕಾಶವನ್ನು ಸಾರ್ಥಕಗೊಳಿಸುವುದರ ಜತೆಗೆ ಇತರರಿಗೆ ಮಾದರಿಯಾಗುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಗದಗ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಸಚಿವ ಬಸವರಾಜ ರಾಯರಡ್ಡಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಸೋಮವಾರ ಮತ್ತು ಮಂಗಳವಾರ ಎರಡು ದಿನಗಳ ಕಾಲ ನಿರಂತರವಾಗಿ ನಡೆಯಲಿರುವ ಸಭೆಯಲ್ಲಿ ಮೊದಲ ಹಂತವಾಗಿ ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಕರ್ನಾಟಕ ಬೀಜ ನಿಗಮದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಲಾಯಿತು.ಪ್ರತಿಯೊಂದು ಇಲಾಖೆಯಲ್ಲಿನ ಮಂಜೂರಾದ ಹುದ್ದೆಗಳು, ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ, ಖಾಲಿ ಹುದ್ದೆಗಳು, ಹೊರಗುತ್ತಿಗೆ ನೌಕರರ ಸಂಖ್ಯೆ, ವೇತನಕ್ಕೆ ಅಗತ್ಯವಿರುವ ಅನುದಾನ, ಯೋಜನೆಗಳ ಅನುಷ್ಠಾನ, ಇಲಾಖೆಯ ಪ್ರಗತಿ, ವಿಶೇಷ ಸಾಧನೆ ಹಾಗೂ ಕುಂದುಕೊರತೆಗಳ ಕುರಿತು ಅಧಿಕಾರಿಗಳು ಸ್ಪಷ್ಟ ಮತ್ತು ಸಮಗ್ರ ಮಾಹಿತಿ ನೀಡಬೇಕು ಎಂದು ಸಚಿವರು ಸೂಚಿಸಿದರು.ಸಭೆಯಲ್ಲಿ ಅನಗತ್ಯ ವಿಷಯಗಳ ಚರ್ಚೆಗೆ ಅವಕಾಶ ನೀಡದೆ, ಇಲಾಖೆಗೆ ಸಂಬಂಧಿಸಿದ ವಿಷಯಗಳನ್ನೇ ಸ್ಪಷ್ಟವಾಗಿ ಮಂಡಿಸಬೇಕು. ಸರ್ಕಾರದ ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳು ವೈಯಕ್ತಿಕ ಆಸಕ್ತಿ



ವಹಿಸಿ ನಿಗದಿತ ಗುರಿ ಸಾಧಿಸಬೇಕು. ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ ಇಲಾಖೆಯ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಕೃಷಿ ಪ್ರಗತಿಗೆ 23.29 ಕೋಟಿ : ಕೃಷಿ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಜಿಲ್ಲೆಯಲ್ಲಿ ಒಟ್ಟು 204 ಹುದ್ದೆಗಳು ಮಂಜೂರಾಗಿದ್ದು, 83 ಹುದ್ದೆಗಳಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 53 ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಸಿಬ್ಬಂದಿ ವೇತನಕ್ಕಾಗಿ 8.93 ಕೋಟಿ ಹಾಗೂ ಹೊರಗುತ್ತಿಗೆ ಸಿಬ್ಬಂದಿ ವೇತನಕ್ಕಾಗಿ 1.19 ಕೋಟಿ ವೆಚ್ಚವಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.ಕೃಷಿ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ ಕುರಿತು ಮಾಹಿತಿ ಪಡೆದ ಸಚಿವರು, ನಿಗದಿತ ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸಲು ಅಧಿಕಾರಿಗಳು ಹೆಚ್ಚಿನ ಗಮನಹರಿಸಬೇಕು. ಇಲಾಖೆಯ ಯೋಜನೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಜಿಲ್ಲೆಗೆ ಅಂದಾಜು 23.29 ಕೋಟಿ ಅನುದಾನ ಒದಗಿಸಲಾಗುತ್ತಿದೆ. ಈ ಅನುದಾನ ಸಮರ್ಪಕವಾಗಿ ಬಳಕೆಯಾಗಬೇಕು ಎಂದರು.ಮುಂದಿನ ಸಾಲಿಗೆ ಅಗತ್ಯವಿರುವ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಲಭ್ಯತೆ ಮತ್ತು ಬೇಡಿಕೆ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಸಲ್ಲಿಸುವಂತೆ ಸೂಚಿಸಿದರು.

ಬರ ಪರಿಹಾರಕ್ಕೆ ವಿಶೇಷ ಗಮನ : ತೋಟಗಾರಿಕೆ ಇಲಾಖೆಯಲ್ಲಿ 72 ಹುದ್ದೆಗಳು ಮಂಜೂರಾಗಿದ್ದು, 60 ಹುದ್ದೆಗಳಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ವೇತನಕ್ಕಾಗಿ 6.95 ಕೋಟಿ ಅಗತ್ಯವಿದೆ. ಹೊರಗುತ್ತಿಗೆ ಆಧಾರದ ಮೇಲೆ ಮೂವರು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಅವರ ವೇತನಕ್ಕಾಗಿ 7.59 ಲಕ್ಷ ಪಾವತಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಇಲಾಖೆಯ ವಿವಿಧ ಯೋಜನೆಗಳಿಗೆ ಅಂದಾಜು 14 ಕೋಟಿ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ರೈತರಿಗೆ ಸಹಾಯಧನದ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದ್ದು, ಈರುಳ್ಳಿ ಸಂಗ್ರಹಣಾ ಘಟಕಗಳ ಸ್ಥಾಪನೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದು ವಿವರಿಸಿದರು.

ಜಿಲ್ಲೆಯ ಬರ ಪರಿಸ್ಥಿತಿಯ ಕುರಿತು ಮಾಹಿತಿ ಪಡೆದ ಸಚಿವರು, ಪ್ರಸಕ್ತ ಸಾಲಿನಲ್ಲಿ 7.19 ಲಕ್ಷ ಎಕರೆ ಬಿತ್ತನೆ ಪ್ರದೇಶವಿದ್ದು, 7.01 ಲಕ್ಷ ಎಕರೆ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಜಿಲ್ಲೆಯಲ್ಲಿ ವಾಡಿಕೆಗಿಂತ ಶೇ.38ರಷ್ಟು ಕಡಿಮೆ ಮಳೆಯಾಗಿದೆ. ಬರದಿಂದ ಉಂಟಾದ ಹಾನಿಯ ಅಂದಾಜು ಮೊತ್ತ 262 ಕೋಟಿ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಪ್ರತಿ ಹೆಕ್ಟೇರ್‌ಗೆ 8,500 ಪರಿಹಾರ ನೀಡಬೇಕಿದ್ದು, ರಾಜ್ಯ ಸರ್ಕಾರದಿಂದ ರೈತರಿಗೆ 5,000 ಪರಿಹಾರ ಘೋಷಿಸಲಾಗಿದೆ. ಉಳಿದ 3,500 ಪರಿಹಾರ ಒದಗಿಸುವ ಕುರಿತು ಕ್ರಮವಹಿಸಬೇಕು ಎಂಬ ವಿಷಯ ಸಭೆಯಲ್ಲಿ ಚರ್ಚೆಯಾಯಿತು.

ಡಂಬಳ ತೋಟಗಾರಿಕೆ ಕಾಲೇಜಿನ ಪ್ರಗತಿ ಕುರಿತು ಸಮಗ್ರ ಮಾಹಿತಿ ಪಡೆದು ಮುಂದಿನ ಸಭೆಗೆ ವರದಿ ಸಲ್ಲಿಸುವಂತೆಯೂ ಸಚಿವರು ಸೂಚಿಸಿದರು.ರೇಷ್ಮೆ, ಪಶುಸಂಗೋಪನೆ ಇಲಾಖೆಗೆ ಎಚ್ಚರಿಕೆ : ರೇಷ್ಮೆ ಇಲಾಖೆಯಲ್ಲಿ ಮಂಜೂರಾದ 49 ಹುದ್ದೆಗಳ ಪೈಕಿ 41 ಹುದ್ದೆಗಳು ಖಾಲಿಯಿದ್ದು, ಕೇವಲ 8 ಹುದ್ದೆಗಳಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.ಆದರೆ, ಇಲಾಖೆಯ ಪ್ರಗತಿ ಹಾಗೂ ಸಿಬ್ಬಂದಿ ಕುರಿತಂತೆ ಸಮರ್ಪಕ ಮಾಹಿತಿ ನೀಡುವಲ್ಲಿ ಅಧಿಕಾರಿಗಳು ವಿಫಲರಾದ ಹಿನ್ನೆಲೆಯಲ್ಲಿ ಸಚಿವರು ಅಸಮಾಧಾನ ವ್ಯಕ್ತಪಡಿಸಿದರು. ಅಧಿಕಾರಿಗಳು ತಮ್ಮ ಇಲಾಖೆಯ ಕುರಿತು ಸ್ಪಷ್ಟ ಮಾಹಿತಿ ಹೊಂದಿರಬೇಕು. ಸಭೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಲು ಸಾಧ್ಯವಾಗದಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೋಟಿಸ್ ನೀಡುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುಕುಲ್ ಜೈನ್ ಅವರಿಗೆ ಸೂಚಿಸಿದರು.

ಪಶುಸಂಗೋಪನೆ ಇಲಾಖೆಯಲ್ಲಿ 384 ಹುದ್ದೆಗಳು ಮಂಜೂರಾಗಿದ್ದು, 106 ಹುದ್ದೆಗಳಲ್ಲಿ ಮಾತ್ರ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 278 ಹುದ್ದೆಗಳು ಖಾಲಿಯಿವೆ. ಸಿಬ್ಬಂದಿ ವೇತನಕ್ಕಾಗಿ 12.12 ಕೋಟಿ ಅನುದಾನದ ಅಗತ್ಯವಿದೆ. ಅಲ್ಲದೆ, 87 ಹೊರಗುತ್ತಿಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಇಲಾಖೆಗೆ ಐದು ಸಂಚಾರಿ ಪಶುವೈದ್ಯಕೀಯ ವಾಹನಗಳ ಅವಶ್ಯಕತೆಯಿದ್ದು, ಒಟ್ಟು ಅಂದಾಜು 12 ಕೋಟಿ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಇಲಾಖೆಯ ಪ್ರಗತಿ ಸಮಾಧಾನಕರವಾಗಿಲ್ಲ ಎಂದು ಸಚಿವರು ಖಾರವಾಗಿ ಪ್ರತಿಕ್ರಿಯಿಸಿ, ಸಮರ್ಪಕ ಮಾಹಿತಿ ನೀಡದ ಪಶು ಸಂಗೋಪನಾ ಇಲಾಖೆ ಉಪನಿರ್ದೇಶಕರಿಗೆ ಎಚ್ಚರಿಕೆ ನೋಟಿಸ್ ನೀಡುವಂತೆ ಸೂಚಿಸಿದರು.

ಜಿಲ್ಲೆಯ ಪಾಲಿಕ್ಲಿನಿಕ್ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಹಾಗೂ ಕಾರ್ಯನಿರ್ವಹಣೆ ಪರಿಶೀಲಿಸುವುದಾಗಿಯೂ ತಿಳಿಸಿದರು.

ಹಮ್ಮಿಗಿ ಜಲಾಶಯದಲ್ಲಿ ಮೀನುಗಾರಿಕೆ ಫಾರ್ಮ್ ಸ್ಥಾಪನೆಗೆ ಸೂಚನೆ : ಮೀನುಗಾರಿಕೆ ಇಲಾಖೆಯಲ್ಲಿ 12 ಹುದ್ದೆಗಳು ಮಂಜೂರಾಗಿರುವ ಕುರಿತು ಮಾಹಿತಿ ಪಡೆದ ಸಚಿವರು, ಉಚಿತ ಮೀನುಮರಿ ವಿತರಣೆ ಸೇರಿದಂತೆ ಮೀನುಗಾರರಿಗೆ ಪ್ರೋತ್ಸಾಹ ನೀಡುವ ಯೋಜನೆಗಳ ಅನುಷ್ಠಾನ ಪರಿಶೀಲಿಸಿದರು. ಪರಿಶಿಷ್ಟ ಜಾತಿಯ ಮೀನುಗಾರರಿಗೆ ತಲಾ ₹50 ಸಾವಿರ ಮೌಲ್ಯದ ಮೀನುಗಾರಿಕೆ ಸಲಕರಣೆಗಳನ್ನು ವಿತರಿಸುವ ಯೋಜನೆಯ ಕುರಿತು ಮಾಹಿತಿ ಪಡೆದರು.

ಮು

ಬೆಲೆ ಏರಿಕೆ ಹಿಂಪಡೆಯಲು ಆಗ್ರಹ; ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ, ಸರ್ಕಾರಕ್ಕೆ ಮನವಿ ಸಲ್ಲಿಕೆ

ಪಾಂಡವ ನ್ಯೂಸ್, ರಾಣೇಬೆನ್ನೂರು : ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆ ಏರಿಕೆ ಹಾಗೂ ಕೆಎಸ್ಆರ್‌ಟಿಸಿ ಬಸ್ ಪ್ರಯಾಣ ದರ ಹೆಚ್ಚಳವನ್ನು ತಕ್ಷಣ ಹಿಂಪಡೆಯುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಶುಕ್ರವಾರ ನಗರದ ತಹಸೀಲ್ದಾರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಬಳಿಕ ಶಿರಸ್ತೇದಾರ್ ಎಂ.ಎಚ್. ಕಡೂರ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಹಾವೇರಿ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಮಾತನಾಡಿ, ರಾಜ್ಯ ಸರ್ಕಾರ ಹಾಲು ಸೇರಿದಂತೆ ಹಾಲಿನ ಉತ್ಪನ್ನಗಳ ಬೆಲೆಯನ್ನು ₹8ರಿಂದ ₹35ರವರೆಗೆ ಹೆಚ್ಚಿಸಿರುವುದು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಹೊರೆಯಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಈ ನಿರ್ಧಾರ ಮತ್ತಷ್ಟು ಆರ್ಥಿಕ ಹೊರೆ ತಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಎಸ್ಆರ್‌ಟಿಸಿ ಬಸ್ ಪ್ರಯಾಣ ದರ ಹೆಚ್ಚಳದಿಂದ ಕಾರ್ಮಿಕರು, ವಿದ್ಯಾರ್ಥಿಗಳು, ನೌಕರರು ಹಾಗೂ ನಿತ್ಯ ಪ್ರಯಾಣಿಸುವ ಸಾರ್ವಜನಿಕರ ಜೇಬಿಗೆ ಕತ್ತರಿ ಬಿದ್ದಿದೆ. ಸಾರ್ವಜನಿಕ ಸಾರಿಗೆ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಲಭ್ಯವಾಗಬೇಕು. ದರ ಏರಿಕೆಯಿಂದ ಸಾಮಾನ್ಯ ಜನರ ಜೀವನ ನಿರ್ವಹಣೆ ಮತ್ತಷ್ಟು ದುಸ್ತರವಾಗಬಾರದು ಎಂದು ಒತ್ತಾಯಿಸಿದರು.



ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ರೈತರು ಹಾಗೂ ಗ್ರಾಮೀಣ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರ ಕೂಡಲೇ ಹಾಲು ಮತ್ತು ಹಾಲಿನ ಉತ್ಪನ್ನಗಳ ಬೆಲೆ ಏರಿಕೆ ಹಿಂಪಡೆಯಬೇಕು. ಬಸ್ ಪ್ರಯಾಣ ದರ ಹೆಚ್ಚಳವನ್ನು ರದ್ದುಗೊಳಿಸಬೇಕು. ರೈತರಿಗೆ ವಿಶೇಷ ಬರ ಪರಿಹಾರ ನೀಡುವುದರ ಜತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ, ಜಾನುವಾರುಗಳಿಗೆ ಉಚಿತ ಮೇವು ಹಾಗೂ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಅಕ್ಕಿ, ಸಕ್ಕರೆ, ಬೇಳೆಕಾಳು ಹಾಗೂ ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ವಿದ್ಯುತ್ ದರ ಇಳಿಕೆ ಮಾಡಬೇಕು. ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಆರ್ಥಿಕ ನೆರವು ಒದಗಿಸಬೇಕು. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಜನಸಾಮಾನ್ಯರಿಗೆ ಹೊರೆಯಾಗದ ರೀತಿಯಲ್ಲಿ ನಿರ್ವಹಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಸರ್ಕಾರ ಕೂಡಲೇ ಜನರ ಬೇಡಿಕೆಗಳಿಗೆ ಸ್ಪಂದಿಸಬೇಕು. ಇಲ್ಲವಾದಲ್ಲಿ ಜೆಡಿಎಸ್ ವತಿಯಿಂದ ರಾಜ್ಯಾದ್ಯಂತ ತೀವ್ರ ಸ್ವರೂಪದ ಪ್ರತಿಭಟನೆ ಹಾಗೂ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಮಂಜುನಾಥ ಗೌಡಶಿವಣ್ಣನವರ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ನಿಂಗಪ್ಪ ಸತ್ಯಪ್ಪನವರ, ನಗರ ಘಟಕದ ಅಧ್ಯಕ್ಷ ಲಿಂಗರಾಜ್ ಹೊನ್ನಾಳಿ, ಶಿವಪುತ್ರಪ್ಪ ನಡುವಿನಮನಿ, ಶಿವಪ್ಪ ಬಾರ್ಕಿ, ಮಂಜುನಾಥ ಹಲಗೇರಿ, ಸಿದ್ದಣ್ಣ ಪಟ್ಟಣಶೆಟ್ಟಿ, ನಾಗರಾಜ ಕಜ್ಜರಿ, ಗುರುರಾಜ ಗೂಜನೂರ, ಹನುಮಂತಪ್ಪ ಬಿಷ್ಟಣ್ಣನವರ, ಮೈಲಪ್ಪ ಕರ್ತಿಮಾಳರ, ನಿಂಗಪ್ಪ ದೇವರಗುಡ್ಡ, ಶಿವು ನಿಟ್ಟೂರು, ಜಿಲ್ಲಾಧ್ಯಕ್ಷೆ ಶಕುಂತಲಾ ನೀರಲಗಿ, ಮಹಿಳಾ ನಗರ ಘಟಕದ ಅಧ್ಯಕ್ಷೆ ಉಷಾ ಜಾಡಮಲಿ, ತಾಲೂಕು ಅಧ್ಯಕ್ಷೆ ಲಕ್ಷ್ಮಿ ಕದರಮಂಡಲಗಿ, ಉಪಾಧ್ಯಕ್ಷೆ ರಾಜೇಶ್ವರಿ ಆರೇಮಲ್ಲಾಪುರ, ಕಸ್ತೂರಿ ಅರ್ಕಾಸಾಲಿ, ಲತಾ ಕೊಪ್ಪದ, ಆಶಾ, ಗಾಯತ್ರಿ ಪಟ್ಟಣಶೆಟ್ಟಿ, ರೂಪಾ ಹೊಳಿಯಮ್ಮನವರ, ಪುಷ್ಪಾ ಕಿತ್ತೂರಮಠ, ಪೂಜಾ ದೈವಜ್ಞ, ಮಂಗಳಾ ಬೆಳಕೇರಿ, ಶಕುಂತಲಾ ಮಳ್ಳಿ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಬ್ಬಿನ ಗದ್ದೆಯಲ್ಲಿ 10 ಅಡಿ ಹೆಬ್ಬಾವು ಪ್ರತ್ಯಕ್ಷ!



ಪಾಂಡವ ನ್ಯೂಸ್, ಹಾವೇರಿ : ಕಬ್ಬಿನ ಗದ್ದೆಯಲ್ಲಿ ಅಡಗಿಕೊಂಡಿದ್ದ ಸುಮಾರು 10 ಅಡಿ ಉದ್ದದ, 40 ಕೆ.ಜಿ. ತೂಕದ ಬೃಹತ್ ಹೆಬ್ಬಾವನ್ನು ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತರು ಸುರಕ್ಷಿತವಾಗಿ ಸೆರೆಹಿಡಿದು ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಿದ್ದಾರೆ.

ಹಾನಗಲ್ಲು ತಾಲೂಕಿನ ಹಾವಣಗಿ ಗ್ರಾಮದ ರೈತ ಮಹೇಶ ಗುಮಗಂಡಿ ಅವರ ಕಬ್ಬಿನ ಗದ್ದೆಯಲ್ಲಿ ಬೃಹತ್ ಗಾತ್ರದ ಹೆಬ್ಬಾವು ಕಾಣಿಸಿಕೊಂಡು ರೈತರಲ್ಲಿ ಆತಂಕ ಮೂಡಿಸಿತ್ತು. ಸುಮಾರು 10 ಅಡಿ ಉದ್ದ ಹಾಗೂ 40 ಕೆ.ಜಿ. ತೂಕವಿದ್ದ ಹೆಬ್ಬಾವು ಗದ್ದೆಯಲ್ಲಿ ಅಡಗಿಕೊಂಡಿದ್ದರಿಂದ ಕೃಷಿ ಚಟುವಟಿಕೆಗಳಿಗೆ ತೆರಳಲು ರೈತರು ಭಯಪಡುವಂತಾಗಿತ್ತು. ಕೂಡಲೇ ಅಕ್ಕಿಆಲೂರಿನ ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತ ಗಿರೀಶ್ ಎಸ್.ಕೆ. ಅವರಿಗೆ ಮಾಹಿತಿ ನೀಡಲಾಯಿತು. ಸ್ಥಳಕ್ಕೆ ಆಗಮಿಸಿದ ಅವರು ಕಾರ್ಯಾಚರಣೆ ನಡೆಸಿ, ಹೆಬ್ಬಾವನ್ನು ಯಾವುದೇ ತೊಂದರೆಯಾಗದಂತೆ ಸುರಕ್ಷಿತವಾಗಿ ಸೆರೆಹಿಡಿದರು. ಬಳಿಕ ಹೆಬ್ಬಾವನ್ನು ಮಾಕೋಪ್ಪ–ಮಕರಳ್ಳಿ ನಡುವಿನ ಅರಣ್ಯ ಪ್ರದೇಶಕ್ಕೆ ಕೊಂಡೊಯ್ದು ಸುರಕ್ಷಿತವಾಗಿ ಬಿಡುಗಡೆ ಮಾಡಿದರು. ಇದರಿಂದ ಆತಂಕಗೊಂಡಿದ್ದ ರೈತರು ನಿಟ್ಟುಸಿರು ಬಿಡುವಂತಾಯಿತು.

ಜೀವದಾನ ನೀಡಿದ ಕಾರ್ಯ : ಕೃಷಿ ಜಮೀನುಗಳಲ್ಲಿ ಬೆಳೆದಿರುವ ಕಬ್ಬಿನ ಬೆಳೆ ಹಾವುಗಳಿಗೆ ಆಶ್ರಯ ತಾಣವಾಗುತ್ತದೆ. ಆಹಾರ ಅರಸಿ ಇಂತಹ ಜೀವಿಗಳು ಜಮೀನುಗಳಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯ. ಹಾವುಗಳು ಕಂಡುಬಂದಾಗ ಭಯದಿಂದ ಕೊಲ್ಲದೆ, ಅರಣ್ಯ ಇಲಾಖೆ ಅಥವಾ ವನ್ಯಜೀವಿ ಸಂರಕ್ಷಣಾ ಕಾರ್ಯಕರ್ತರಿಗೆ ಮಾಹಿತಿ ನೀಡಬೇಕು. ವನ್ಯಜೀವಿಗಳ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ ಎಂಬ ಸಂದೇಶವನ್ನು ಈ ಕಾರ್ಯಾಚರಣೆ ಸಾರಿದೆ. ರೈತರಲ್ಲಿ ಆತಂಕ ಮೂಡಿಸಿದ್ದ ಬೃಹತ್ ಹೆಬ್ಬಾವನ್ನು ಯಾವುದೇ ಹಾನಿಯಾಗದಂತೆ ರಕ್ಷಿಸಿ ಕಾಡಿಗೆ ಮರಳಿಸಿದ ಗಿರೀಶ್ ಅವರ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಕೋಳಿ ಸಾಕಾಣಿಕೆದಾರರಿಂದ ಅಹೋರಾತ್ರಿ ಧರಣಿ!

ಪಾಂಡವ ನ್ಯೂಸ್, ರಾಣೆಬೆನ್ನೂರು : ಕೋಳಿ ಸಾಕಾಣಿಕೆ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರೂ, ಸಾಕಾಣಿಕೆದಾರರಿಗೆ ನೀಡುತ್ತಿರುವ ಖರೀದಿ ದರದಲ್ಲಿ ಸಮರ್ಪಕ ಹೆಚ್ಚಳ ಮಾಡದಿರುವುದನ್ನು ಖಂಡಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನ.16ರಂದು ತಾಲೂಕಿನ ತರೇದಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ವರ ಹ್ಯಾಚರೀಸ್ ಕಂಪನಿ ಎದುರು ಅಹೋರಾತ್ರಿ ಧರಣಿ ನಡೆಸಲು ನಿರ್ಧರಿಸಲಾಗಿದೆ ಎಂದು ಹಾವೇರಿ ಜಿಲ್ಲಾ ಕೋಳಿ ಸಾಕಾಣಿಕೆದಾರರ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ಓಲೆಕಾರ ತಿಳಿಸಿದರು.

ನಗರದ ಪತ್ರಿಕಾ ಕಾರ್ಯಾಲಯದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2020ರಲ್ಲಿ ಕಂಪನಿಯು ಪ್ರತಿ ಕೆ.ಜಿ. ಕೋಳಿ ಖರೀದಿ ದರವನ್ನು ವರ್ಷಕ್ಕೆ 50 ಪೈಸೆಯಂತೆ ಹೆಚ್ಚಿಸುವ ಭರವಸೆ ನೀಡಿತ್ತು. ಆದರೆ, ಐದು ವರ್ಷ ಕಳೆದರೂ ಭರವಸೆಯಂತೆ ದರ ಹೆಚ್ಚಿಸಿಲ್ಲ. ಪ್ರಸ್ತುತ ಕೆ.ಜಿಗೆ ಕೇವಲ 6.50 ಮಾತ್ರ ನೀಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋಳಿ ಸಾಕಾಣಿಕೆಗೆ ಅಗತ್ಯವಿರುವ ಕಟ್ಟಿಗೆ, ಗೋಳಲಿ, ವಿದ್ಯುತ್, ಸುಣ್ಣ, ಫಿನಾಯಿಲ್ ಸೇರಿದಂತೆ ವಿವಿಧ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿದೆ. ಇದರಿಂದ ಉತ್ಪಾದನಾ ವೆಚ್ಚ ಗಣನೀಯವಾಗಿ ಹೆಚ್ಚಿದ್ದು, ಸಾಕಾಣಿಕೆದಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.



ಕಂಪನಿಯಿಂದ ಪೂರೈಕೆಯಾಗುವ ಕೋಳಿ ಮರಿಗಳ ಆರೋಗ್ಯ ಮತ್ತು ಬೆಳವಣಿಗೆಯಲ್ಲಿಯೂ ಸಮಸ್ಯೆಗಳು ಕಂಡುಬರುತ್ತಿವೆ. ಇತರ ಕಂಪನಿಗಳು ಮಾರುಕಟ್ಟೆಯ ಸ್ಥಿತಿಗತಿಗೆ ಅನುಗುಣವಾಗಿ ಉತ್ತಮ ದರ ನೀಡುತ್ತಿದ್ದರೂ, ಶ್ರೀ ವೆಂಕಟೇಶ್ವರ ಹ್ಯಾಚರೀಸ್ ಮಾತ್ರ ಹಳೆಯ ದರವನ್ನೇ ಮುಂದುವರಿಸಿರುವುದು ಸಾಕಾಣಿಕೆದಾರರಿಗೆ ಅನ್ಯಾಯ ಮಾಡಿದಂತಾಗಿದೆ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಸುಮಾರು 2 ಸಾವಿರ ಕುಟುಂಬಗಳು ಕೋಳಿ ಸಾಕಾಣಿಕೆಯನ್ನೇ ನಂಬಿ ಜೀವನ ನಡೆಸುತ್ತಿವೆ. ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಕೋಳಿ ಖರೀದಿ ದರವನ್ನು ಪರಿಷ್ಕರಿಸಿ ಕೆ.ಜಿಗೆ 10.50 ನೀಡಬೇಕು. ಗುಣಮಟ್ಟದ ಕೋಳಿ ಮರಿಗಳನ್ನು ಪೂರೈಸಬೇಕು ಹಾಗೂ ಸಾಕಾಣಿಕೆದಾರರ ಸಮಸ್ಯೆಗಳಿಗೆ ಕಂಪನಿಯ ಆಡಳಿತ ಮಂಡಳಿ ತಕ್ಷಣ ಸ್ಪಂದಿಸಬೇಕು ಎಂಬುದು ಸಂಘದ ಪ್ರಮುಖ ಬೇಡಿಕೆಗಳಾಗಿವೆ ಎಂದರು.

ಕಂಪನಿ ಆಡಳಿತ ಮಂಡಳಿ ಸಾಕಾಣಿಕೆದಾರರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ನ್ಯಾಯಯುತ ಪರಿಹಾರ ಕಲ್ಪಿಸದಿದ್ದರೆ, ನ.16ರಂದು ಬೆಳಗ್ಗೆ 11 ಗಂಟೆಯಿಂದ ಬೇಡಿಕೆಗಳು ಈಡೇರುವವರೆಗೂ ಕಂಪನಿ ಎದುರು ಅಹೋರಾತ್ರಿ ಧರಣಿ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಶಂಕರಗೌಡ ಗ್ಯಾನಗೌಡ್ರ, ಬಸವನಗೌಡ ಗಂಗನಗೌಡ್ರ, ನಾಗರಾಜ ಏಕಬೋಟಿ, ಮಂಜಪ್ಪ ಗುಗ್ಗರಿ ಇದ್ದರು.

ಬೈಕ್‌ಗೆ ಟಾಟಾ ಏಸ್ ಡಿಕ್ಕಿ; ಇಬ್ಬರು ಯುವಕರ ದುರ್ಮರಣ | ಅಂತ್ಯಕ್ರಿಯೆಯಲ್ಲಿ ಇಡೀ ಗ್ರಾಮ ಭಾಗಿ

ಸಾವಿನಲ್ಲೂ ಒಂದಾದ ಬಾಲ್ಯಸ್ನೇಹಿತರು!

ಪಾಂಡವ ನ್ಯೂಸ್, ಗುತ್ತಲ : ಬಾಲ್ಯದಿಂದಲೂ ಒಟ್ಟಿಗೆ ಬೆಳೆದವರು, ಸುಖ–ದುಃಖದಲ್ಲೂ ಜೊತೆಯಾಗಿದ್ದವರು. ಎರಡು ದೇಹ ಒಂದೇ ಪ್ರಾಣ ಎಂಬಂತಿದ್ದ ಇಬ್ಬರು ಸ್ನೇಹಿತರು ವಿಧಿಯಾಟಕ್ಕೆ ಬಲಿಯಾಗಿ ಸಾವಿನಲ್ಲೂ ಒಂದಾಗಿದ್ದಾರೆ.

ಗುತ್ತಲ ಸಮೀಪದ ಮರೋಳ ಗ್ರಾಮದ ಅಭಿಷೇಕ ಮಾಗಡಿ (21) ಹಾಗೂ ಮುತ್ತು ಹುಲಿಕಟ್ಟಿ (21) ಶನಿವಾರ ಕುಷ್ಟಗಿ–ಗಜೇಂದ್ರಗಡ ರಸ್ತೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ವೈಯಕ್ತಿಕ ಕೆಲಸದ ನಿಮಿತ್ತ ಇಬ್ಬರೂ ಬೈಕ್‌ನಲ್ಲಿ ಕುಷ್ಟಗಿಗೆ ತೆರಳಿದ್ದರು. ಕೆಲಸ ಮುಗಿಸಿಕೊಂಡು ಮರಳಿ ಗ್ರಾಮಕ್ಕೆ ಬರುತ್ತಿದ್ದಾಗ ಮಾರ್ಗಮಧ್ಯೆ ಟಾಟಾ ಏಸ್ ವಾಹನಕ್ಕೆ ಬೈಕ್ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ.



ಬಾಲ್ಯದಿಂದಲೂ ಅವಿನಾಭಾವ ಸ್ನೇಹ ಹೊಂದಿದ್ದ ಯುವಕರಿಬ್ಬರ ಅಕಾಲಿಕ ಸಾವು ಮರೋಳ ಗ್ರಾಮಸ್ಥರನ್ನು ಆಘಾತಕ್ಕೀಡು ಮಾಡಿದೆ. ಸದಾ ಒಟ್ಟಿಗೆ ಕಾಣಿಸಿಕೊಳ್ಳುತ್ತಿದ್ದ ಗೆಳೆಯರು ಇನ್ನಿಲ್ಲ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮದಲ್ಲಿ ಶೋಕದ ಛಾಯೆ ಆವರಿಸಿತು.

ಇಬ್ಬರ ಅಂತ್ಯಕ್ರಿಯೆಯಲ್ಲಿ ಇಡೀ ಗ್ರಾಮದ ಜನರು ಪಾಲ್ಗೊಂಡು ಅಂತಿಮ ನಮನ ಸಲ್ಲಿಸಿದರು. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮಸ್ಥರು ಕಂಬನಿ ಮಿಡಿದರು. ಬದುಕಿನುದ್ದಕ್ಕೂ ಜೊತೆಯಾಗಿದ್ದ ಸ್ನೇಹಿತರು ಸಾವಿನಲ್ಲೂ ಒಂದಾದ ಘಟನೆ ಗ್ರಾಮಸ್ಥರ ಮನಕಲಕಿದೆ.

ಹಾವೇರಿ ವಿವಿ ಹಾಸ್ಟೆಲ್ ಬಳಿ ಅಪರಿಚಿತನ ಅನುಚಿತ ವರ್ತನೆ ಆರೋಪ: ವಿದ್ಯಾರ್ಥಿನಿಯರ ಧರಣಿ

ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ; ಸಿಸಿ ಕ್ಯಾಮೆರಾ, ರಾತ್ರಿ ಕಾವಲುಗಾರರ ನೇಮಕಕ್ಕೆ ಆಗ್ರಹ

ಪಾಂಡವ ನ್ಯೂಸ್, ಹಾವೇರಿ : ಕೆರಿಮತ್ತಿಹಳ್ಳಿಯ ಹಾವೇರಿ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿದ್ಯಾರ್ಥಿನಿಯರ ಹಾಸ್ಟೆಲ್ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಅನುಚಿತವಾಗಿ ವರ್ತಿಸಿದ್ದಾನೆ ಎಂಬ ಆರೋಪ ಕೇಳಿಬಂದಿದ್ದು, ಇದರಿಂದ ವಿದ್ಯಾರ್ಥಿನಿಯರಲ್ಲಿ ಆತಂಕ ಉಂಟಾಗಿದೆ. ಘಟನೆ ಖಂಡಿಸಿ ಹಾಸ್ಟೆಲ್‌ಗಳಿಗೆ ಸೂಕ್ತ ಭದ್ರತೆ ಕಲ್ಪಿಸುವಂತೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಭಾನುವಾರ ಪ್ರತಿಭಟನಾ ಧರಣಿ ನಡೆಸಿದರು.

ವಿದ್ಯಾರ್ಥಿನಿಯರು ನೀಡಿದ ಮಾಹಿತಿಯ ಪ್ರಕಾರ, ಶನಿವಾರ ರಾತ್ರಿ ಸುಮಾರು 7 ಗಂಟೆಗೆ ಅಪರಿಚಿತ ವ್ಯಕ್ತಿಯೊಬ್ಬ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ ವಿದ್ಯಾರ್ಥಿನಿಯರ ಹಾಸ್ಟೆಲ್ ಬಳಿ ಬೆತ್ತಲೆಯಾಗಿ ಕಾಣಿಸಿಕೊಂಡು ಕಿಟಕಿಯ ಮೂಲಕ ಲೈಂಗಿಕ ಪ್ರಚೋದನಕಾರಿ ರೀತಿಯಲ್ಲಿ ವರ್ತಿಸಿದ್ದಾನೆ ಎನ್ನಲಾಗಿದೆ. ಬಳಿಕ ರಾತ್ರಿ 9 ಗಂಟೆ ಸುಮಾರಿಗೆ ಶ್ರೀಕಂಠಪ್ಪ ಬಡಾವಣೆಯ ಬಿಸಿಎಂ ಹಾಸ್ಟೆಲ್ ಬಳಿಯೂ ಇದೇ ರೀತಿಯ ವರ್ತನೆ ತೋರಿದ್ದಾನೆ ಎಂದು ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ. ಈ ಘಟನೆಗಳಿಂದ ಎರಡೂ ಹಾಸ್ಟೆಲ್‌ಗಳ ವಿದ್ಯಾರ್ಥಿನಿಯರು ಭಯಭೀತರಾಗಿದ್ದಾರೆ.

ಘಟನೆಯಿಂದ ಆತಂಕಗೊಂಡ ವಿದ್ಯಾರ್ಥಿನಿಯರು ತಡರಾತ್ರಿ ಎಸ್‌ಎಫ್‌ಐ ಕಾರ್ಯಕರ್ತರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಕಾರ್ಯಕರ್ತರು 112 ತುರ್ತು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಪೊಲೀಸರನ್ನು ಸ್ಥಳಕ್ಕೆ ಕರೆಯಿಸಿ ಘಟನೆ ಕುರಿತು ಮಾಹಿತಿ ನೀಡಿದ್ದಾರೆ. ಆತಂಕದ ನಡುವೆ ರಾತ್ರಿ ಕಳೆದ ವಿದ್ಯಾರ್ಥಿನಿಯರು, ಭಾನುವಾರ ಮುಂಜಾನೆಯಿಂದ ಹಾಸ್ಟೆಲ್ ಎದುರು ಧರಣಿ ಆರಂಭಿಸಿದರು.



ಸಂಬಂಧಿಸಿದ ಅಧಿಕಾರಿಗಳು ಸ್ಥಳಕ್ಕೆ ಬಂದು ಸಮಸ್ಯೆಗಳಿಗೆ ಪರಿಹಾರ ಸೂಚಿಸುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟುಹಿಡಿದರು.

ಹಾಸ್ಟೆಲ್‌ಗಳಲ್ಲಿ ಸಿಸಿಟಿವಿ ಕ್ಯಾಮೆರಾ, ರಾತ್ರಿ ಕಾವಲುಗಾರರು ಹಾಗೂ ಅಗತ್ಯ ಭದ್ರತಾ ವ್ಯವಸ್ಥೆ ಇಲ್ಲದಿರುವುದರಿಂದ ವಿದ್ಯಾರ್ಥಿನಿಯರು ಆತಂಕದಲ್ಲಿ ವಾಸಿಸುವಂತಾಗಿದೆ ಎಂದು ಪ್ರತಿಭಟನಾಕಾರರು ದೂರಿದರು. ವಿದ್ಯಾರ್ಥಿನಿಯರಿಗೆ ಮಾನಸಿಕ ಕಿರಿಕಿರಿ ಉಂಟುಮಾಡಿದ ವ್ಯಕ್ತಿಯನ್ನು ಪತ್ತೆಹಚ್ಚಿ, ಘಟನೆ ಕುರಿತು ಸೂಕ್ತ ತನಿಖೆ ನಡೆಸಬೇಕು. ಹಾಸ್ಟೆಲ್ ಎದುರು ಹೈಮಾಸ್ಟ್ ದೀಪ ಅಳವಡಿಸಿ, ಸಿಸಿಟಿವಿ ಕ್ಯಾಮೆರಾ ಹಾಗೂ ರಾತ್ರಿ ಕಾವಲುಗಾರರ ವ್ಯವಸ್ಥೆ ಮಾಡಬೇಕು ಎಂದು ಎಸ್–ಎಫ್‌ಐ ವಿಶ್ವವಿದ್ಯಾಲಯ ಘಟಕದ ಉಪಾಧ್ಯಕ್ಷ ಬಸವರಾಜ ಎಸ್. ಆಗ್ರಹಿಸಿದರು.

ಘಟನೆ ಕುರಿತು ಸಮಗ್ರ ತನಿಖೆ ನಡೆಸಿ, ಆರೋಪಿತ ವ್ಯಕ್ತಿಯನ್ನು ಪತ್ತೆಹಚ್ಚಿ ಕಾನೂನು ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿನಿಯರಿಗೆ ಸೂಕ್ತ ರಕ್ಷಣೆ ಒದಗಿಸುವಲ್ಲಿ ನಿರ್ಲಕ್ಷ್ಯ ತೋರಿದರೆ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಎಸ್‌ಎಫ್‌ಐ ಜಿಲ್ಲಾಧ್ಯಕ್ಷ ಅರುಣಕುಮಾರ ನಗವತ